ಲೋಕಹಿತಂ ಮಮ ಕರಣೀಯಂ

# ಸೇವಾ ದಿಶಾ

ಹಿಂದು ಸೇವಾ ಪ್ರತಿಷ್ಠಾನದ ವಾರ್ತಾಪತ್ರಿಕೆ

ಸಂಪುಟ : 4 ಸಂಚಿಕೆ : 8 ಮೇ - 2009 ಖಾಸಗಿ ಪ್ರಸಾರಕ್ಕಾಗಿ ಪುಟಗಳು : 8 ಬೆಲೆ : 5-00

## ರಾಜಕಾರಣಿಗಳು ಸೇವೆಯ ಮಹತ್ವ ಅರಿಯಬೇಕು

### ಸೇವಾ ಶಿಕ್ಷಣ ಶಿಬಿರದಲ್ಲಿ ಸಚಿವ ಶ್ರೀಗೋವಿಂದ ಕಾರಜೋಳ




**ವೇದಿಕೆಯಲ್ಲಿರುವವರು ಶ್ರೀಧರ್ ಸಾಗರ್, ಶ್ರೀ ಜಗದೀಶ್ ಗುಡಗಂಟಿ, ಶ್ರೀ ಗೋವಿಂದಕಾರಜೋಳ, ಡಾ॥ ಮೋಹನ್ ಬಿರಾದರ**

ಹಿಂದು ಸೇವಾ ಪ್ರತಿಷ್ಠಾನದ ವತಿಯಿಂದ ನಡೆಯುವ ಸೇವಾ ಶಿಕ್ಷಣ ಶಿಬಿರವು ಈ ಬಾರಿ ಮುಧೋಳ ಸಮೀಪ ಇರುವ ಮಾಲಾಪುರದ ಭಾಗೀರಥಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮೇ 1, 2009 ರಂದು ಆರಂಭಗೊಂಡಿದೆ. ಶಿಬಿರದ ಉದ್ಘಾಟಕರಾಗಿ ಆಗಮಿಸಿದ್ದವರು ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಸಚಿವರಾದ ಮಾನ್ಯ ಶ್ರೀ ಗೋವಿಂದ ಕಾರಜೋಳರವರು. ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಯುತ ಜಗದೀಶ ಗುಡಗಂಟಿಯವರು ಅಧ್ಯಕ್ಷ ಸ್ಥಾನದಲ್ಲಿದ್ದರು. ಪ್ರತಿಷ್ಠಾನದ ನಿರ್ದೇಶಕರಾದ ಶ್ರೀಯುತ ಶ್ರೀಧರ ಸಾಗರರವರು ಮುಖ್ಯ ಅತಿಥಿಗಳಾಗಿದ್ದರು.

ಮನುಷ್ಯ ತನ್ನ ಪ್ರಯತ್ನದಿಂದ ಸೇವೆ ಎನ್ನುವ ಪದದ ಮಹತ್ವವನ್ನು ಹೆಚ್ಚಿಸಬೇಕು. ಆದರೆ ಇಂದು ಅದನ್ನು ಕಳೆಯುತ್ತಿದ್ದಾನೆ. ಸೇವೆ ಮಾಡಲು ಅಧಿಕಾರಬೇಕೆ? ಅಧಿಕಾರ ಇಲ್ಲದೆಯೂ ಸೇವೆ ಮಾಡುವಂತಾಗಬೇಕು. ನಮ್ಮ ಆವಶ್ಯಕತೆಗಿಂತ ಹೆಚ್ಚು ಐಶ್ವರ್ಯ ಶೇಖರಣೆಯಾದರೆ, ಆವಶ್ಯಕತೆ ಇರುವೆಡೆ ವಿತರಣೆಯಾಗಬೇಕು ಎಂದರು.

ತಾನು ಪರಿಶ್ರಮದಿಂದಗಳಿಸಿದ ಹಣ ಉಳಿದವರ ಕಲ್ಯಾಣಕ್ಕಾಗಿಯೂ ವಿನಿಯೋಗವಾಗಬೇಕು. ಅದಕ್ಕಾಗಿ ಬಸವಣ್ಣನವರು ದಾಸೋಹದಂತಹ ಪದ್ಧತಿಯನ್ನು ಜಾರಿಗೆ ತಂದರು. ರಾಜಕಾರಣದಲ್ಲಿ ತೊಡಗಿದವರಿಗೂ ಸೇವಾ ಮನೋಭಾವ ಅರ್ಥೈಸುವ ಅಗತ್ಯವಿದೆ ಎಂದರು. ಎಲ್ಲ ವರ್ಗದಲ್ಲೂ ಸೇವೆ ಅಗತ್ಯವಿರುವ ವ್ಯಕ್ತಿಗಳು ಇದ್ದಾರೆ. ಎಲ್ಲರೂ ಸೇವೆ ಮಾಡುವವರಾಗಬೇಕು. ವಿಶೇಷವಾಗಿ ದೀನ, ದುರ್ಬಲರಿಗೆ ಸೇವೆ ಮಾಡಿದಾಗ ನಮ್ಮ ಸಮಾಜ ಸದೃಢವಾಗುತ್ತದೆ.

ಶ್ರೀಯುತ ಜಗದೀಶ ಗುಡಗಂಟಿಯವರು ಮಾತನಾಡಿ ಪ್ರತಿಯೊಬ್ಬ ವ್ಯಕ್ತಿಯು ಪರೋಕ್ಷವಾಗಿ ಸೇವಾ ಕಾರ್ಯಮಾಡುತ್ತಿರುತ್ತಾನೆ. ಸೇವೆ ಎನ್ನುವುದು ನಿರಂತರವಾದ ತಪಸ್ಸು ಎಂದರು.

ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಶ್ರೀಧರಸಾಗರವರು ಮಾತನಾಡುತ್ತಾ ಹುಟ್ಟು ಆಕಸ್ಮಿಕ ಸಾವು ನಿಶ್ಚಿತ ಬದುಕು ಪ್ರಸ್ತುತ, ನಮ್ಮ ಬದುಕು ಸಾರ್ಥಕವಾಗಬೇಕಾದರೆ ಸೇವಾ ಕಾರ್ಯದಲ್ಲಿ ತೊಡಗಬೇಕು. ಸ್ವಾಮೀ ವಿವೇಕಾನಂದರು ಹೇಳಿದಂತೆ ದೇವರನ್ನು ಹುಡುಕಿಕೊಂಡು ಹೋದರೆ ದೇವರು ನಮಗೆ ಸಿಗುವುದಿಲ್ಲ. ದೀನ, ದಲಿತ, ಬಡವರಲ್ಲಿ ದೇವರನ್ನು ಕಾಣಬೇಕು. ಇಂತಹವರ ಸೇವೆ ಮಾಡುವುದರ ಮೂಲಕ ನಿಜವಾದ ದೇವರ ಪೂಜೆ ಮಾಡಿದಂತೆ ಎಂದರು. ಅದೇನಿಟ್ಟಿನಲ್ಲಿ ಹಿಂದು ಸೇವಾ ಪ್ರತಿಷ್ಠಾನವು ಕಳೆದ 30 ವರ್ಷಗಳಿಂದ ಸಮಾಜದ ಕೆಲಸ ಮಾಡುತ್ತಿದೆ ಎಂದರು.

ಸಮಾಜಕ್ಕೆ ಹಾನಿಯಾಗುತ್ತಿರುವುದು ದುಷ್ಟ ವ್ಯಕ್ತಿಗಳಿಂದಲ್ಲ, ನಿಷ್ಕ್ರಿಯ ಸಜ್ಜನ ವ್ಯಕ್ತಿಗಳಿಂದ. ಸಜ್ಜನರು ಸಮಾಜದ ಹಿತ ದೃಷ್ಟಿಯಿಂದ ಕೆಲಸ ಮಾಡಿದಾಗ ದುಷ್ಟ ಶಕ್ತಿಗಳ ಸಕ್ರಿಯತೆ ಪ್ರಮಾಣ ಕಡಿಮೆ ಯಾಗುತ್ತದೆ. ಪ್ರತಿಷ್ಠಾನ ಅಂತಹ ಸಾವಿರಾರು ಸಜ್ಜನ ಯುವಕ / ಯುವತಿಯರನ್ನು ಸೇವಾ ಕಾರ್ಯದಲ್ಲಿ ತೊಡಗಿಸಿದೆ.

ಕಳೆದ 30 ವರ್ಷಗಳಲ್ಲಿ ನಮ್ಮ ಸಮಾಜದ ಸಾವಿರಾರು ಯುವಕ / ಯುವತಿಯರು ಸೇವಾವ್ರತಿಗಳಾಗಿ ದೀಕ್ಷೆ ಪಡೆದು ವ್ರತದಂತೆ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ಶಿಶು ಮಂದಿರದ ಪುಟಾಣಿಗಳು ಮೇಡಂ / ಮಿಸ್ ಎಂದು ಕರೆಯುವುದಿಲ್ಲ, ಮಾತಾಜೀ ಎಂದು ಕರೆಯುತ್ತಾರೆ.

ಇಂತಹ ಮಾತಾಜೀಗಳನ್ನು ಕಂಡು ಇಂದು ಜನಸಾಮಾನ್ಯರು ಸೇವೆ ಮಾಡಲು ಮುಂದಾಗುತ್ತಿರುವುದು ಸಂತಸದ ಸಂಗತಿ ಎಂದರು. ಜೊತೆಗೆ ಪ್ರತಿಷ್ಠಾನದ ಪ್ರಕಲ್ಪಗಳಾದ ಅರುಣ ಚೇತನ, ಯೋಗಭಾರತೀ, ನೆಲೆ, ಸೇವಾ ಕಿರಣ, ಯೂತ್ ಫಾರ್ ಸೇವಾ ಇತ್ಯಾದಿ ಕಾರ್ಯ ಚಟುವಟಿಕೆಗಳನ್ನು ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ಶಿಬಿರ ಸ್ವಾಗತ ಸಮಿತಿಯ ಸದಸ್ಯರು ಮಾಲಾಪುರದ ಬಂಧು ಭಗಿನಿಯರು ಪಾಲ್ಗೊಂಡಿದ್ದರು. ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಹರೀಶರವರು ವಂದಿಸಿದರೆ, ಶಿಬಿರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ॥ಮೋಹನ್ ಬಿರಾದರರವರು ಸ್ವಾಗತಿಸಿದರು.

## ನಿಮ್ಮೊಡನೆ

ನಮಸ್ಕಾರ

ಬೇಸಿಗೆ ರಜಾ ಮುಗಿಯುತ್ತಾ ಬಂದಿದೆ. ಜೂನ್ ಮಾಸವೆಂದರೆ ಶಾಲೆಗಳಿಗೆ ಮಕ್ಕಳನ್ನು ಕಳಿಸುವಧಾವಂತ ಪೋಷಕರಿಗಾದರೆ, ಮಕ್ಕಳಿಗಂತೂ ಹೊಸ ದಿರಿಸು ಧರಿಸಿ, ಚೀಲ ಹೆಗಲಿಗೇರಿಸಿ ಶಾಲೆಗೆ ಹೋಗುವ ಸಂಭ್ರಮ.

ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ನಾವೆಲ್ಲ ನಮ್ಮ ಚಳುವಟಿಕೆಗಳಿಗೆ ಹೊಸ ಹೊಳಪು ನೀಡಲು ಸಜ್ಜಾಗಬೇಕಿದೆ. ಈಗಾಗಲೇ ಸೇವಾ ಶಿಕ್ಷಣ ಶಿಬಿರದಲ್ಲಿ ಭಾಗವಹಿಸಿದ ವ್ಯಕ್ತಿಗಳನ್ನು ಭೇಟಿಮಾಡಿ ಅವರವರ ಸ್ಥಾನದಲ್ಲಿ ಒಂದಾದರು ಸೇವಾಕಾರ್ಯ ಕೈಗೊಳ್ಳುವಂತೆ ಪ್ರೇರಣೆ ನೀಡಬೇಕಾಗಿದೆ.

ನಿಮ್ಮವ–ಸಂಪಾದಕ

# ಸೇವೆ ಮಾಡಿ ಸಮಾಜ ಋಣ ತೀರಿಸಿ

**ಪೂಜ್ಯಶ್ರೀ ನೃಸಿಂಹಾಶ್ರಮ ಸ್ವಾಮೀಜಿ**



ಆಶೀರ್ವಾಚನ ನೀಡುತ್ತಿರುವ ಪೂಜ್ಯಸ್ವಾಮೀಜಿ ಮತ್ತು ಶ್ರೀ ಪ್ರಮೋದ್ ಮಧ್ವರಾಜ್, ಶ್ರೀ ಶ್ರೀಧರ್ ಸಾಗರ್

**ಉಡುಪಿ** : ದಿನಾಂಕ 8–05–2009 ರಿಂದ 23–5–2009 ರವರೆಗೆ ಸೇವಾ ಮನೋ ಭಾವನೆಯನ್ನು ಹೊಂದಿದಂತಹ ಕಾರ್ಯಕರ್ತರಿಗೆ ದಕ್ಷಿಣ ಪ್ರಾಂತದ ಸೇವಾ ಶಿಕ್ಷಣ ಶಿಬಿರವನ್ನು ಉಡುಪಿಯಲ್ಲಿ ಏರ್ಪಡಿಸಲಾಗಿದೆ. 11ಜಿಲ್ಲೆಗಳಿಂದ 50 ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ.

ಶಿಬಿರದ ಉದ್ಘಾಟನೆಯನ್ನು ಹಂಗಾರಕಟ್ಟೆಯ ಬಾಳೆಕುದ್ರು ಮಠದ ಪೂಜ್ಯ ಶ್ರೀ ನೃಸಿಂಹಾಶ್ರಮ ಸ್ವಾಮೀಜಿಯವರು ಆಶೀರ್ವಚನ ನೀಡುತ್ತಾ ಮನುಷ್ಯನ ಜೀವನದಲ್ಲಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹಲವಾರು ಋಣಗಳಿವೆ. ಅದರಲ್ಲಿ ಮುಖ್ಯವಾದವುಗಳು ಮೂರು. ದೇವಋಣ, ಋಷಿಋಣ, ಪಿತೃ ಋಣ. ಇದೇ ರೀತಿ ಸಮಾಜ ಋಣ ತೀರಿಸಬೇಕಾದ್ದು ಎಲ್ಲರ ಕರ್ತವ್ಯ. ತ್ಯಾಗದ ಪ್ರತೀಕ ತಾಯಿ. ಸೇವೆ ಮಾಡುವಾಗ ತಾಯಿಯ ಮಾನಸಿಕತೆ ಇರಬೇಕು ಮತ್ತು ಸೇವೆ ಮಾಡುತ್ತೇವೆ ಎಂಬ ಸಂಕಲ್ಪ ಮಾಡಿದರೆ ಸಾಲದು, ಅದನ್ನು ಪೂರ್ಣಗೊಳಿಸುವುದು ಮುಖ್ಯ. ಅಂಥ ಶ್ರೇಷ್ಠ ಶಕ್ತಿಯನ್ನು ಕೊಡು ಎಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ ಎಂದು ಆಶೀರ್ವದಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದಂತಹ ಮಲ್ಪೆಯ ಮತ್ಸ್ಯೋದ್ಯಮಿ ಹಾಗೂ ಸಾಮಾಜಿಕ ಕಾರ್ಯಕರ್ತ ಪ್ರಮೋದ ಮಧ್ವರಾಜ್ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ನನ್ನ ಜೀವನದಲ್ಲಿ ಪ್ರಪ್ರಥಮವಾಗಿ ಇಂಥಾ ಒಂದು ಮಹತ್ತರವಾದಂತಹ ಸೇವೆಗಾಗಿಯೇ ಶಿಕ್ಷಣವನ್ನು ಕೊಡುವಂತಹ ಶಿಬಿರದಲ್ಲಿ ಭಾಗವಹಿಸುತ್ತಿರುವುದು ಮರೆಯಲಾಗದಂತಹ ಮತ್ತು ಅತ್ಯಂತ ಸಂಭ್ರಮದ ಕ್ಷಣ ಎಂದು ಹೇಳಲು ಹೆಮ್ಮೆಪಡುತ್ತೇನೆ. ಮನುಷ್ಯಜನ್ಮದಲ್ಲಿ ಬಹಳಷ್ಟು ಕರ್ತವ್ಯಗಳಿರುತ್ತವೆ. ಅದರಲ್ಲಿ ಮುಖ್ಯ ಹಾಗೂ ಶ್ರೇಷ್ಠ ಕರ್ತವ್ಯ ಸೇವೆ. ಯಾವುದೇ ರೀತಿಯ ಫಲಾಪೇಕ್ಷೆ ಇಲ್ಲದೆ ಸೇವೆ ಮಾಡಿದಾಗ ಅದು ಪುಣ್ಯದ ದಾರಿಯಾಗುತ್ತದೆ. ಸೇವೆ ಎಂಬುದು ದೇವರ ಕೆಲಸ.ಇದರ ಮುಖಾಂತರ ಇನ್ನೊಬ್ಬರ ಕಣ್ಣೀರೊರೆಸುವ ಕಾರ್ಯ ಮಾಡಬೇಕಾದ ಅನಿವಾರ್ಯತೆ ಇದೆ. ನಾವು ಎಷ್ಟು ದಾನ ಮಾಡುತ್ತೇವೊ ಅದರ ಎರಡರಷ್ಟು ಸಂಪತ್ತು ನಮಲ್ಲಿ ವೃದ್ಧಿಯಾಗುತ್ತದೆ ಎಂದು ನುಡಿದರು.

ಹಿಂದು ಸೇವಾ ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಶ್ರೀಧರ ಸಾಗರ್ ರವರು ಕಾರ್ಯಕ್ರಮದಲ್ಲಿ ಮುಖ್ಯಭಾಷಣವನ್ನು ಮಾಡುತ್ತಾ ಇಡೀ ಪ್ರಪಂಚದಲ್ಲಿ ಪ್ರಕೃತಿ ನಮಗೆ ಸೇವಾ ಸಂದೇಶವನ್ನು ಕೊಡುತ್ತಾ ಇರುತ್ತೆ. ಉದಾಹರಣೆಗೆ ಮಣ್ಣು ತನ್ನಲ್ಲಿ ಯಾವುದೆ ಧಾನ್ಯ ಬಿತ್ತಿದರೂ ಉತ್ತಮವಾದ ಫಲವನ್ನು ಕೊಡುತ್ತದೆ. ಜೀವನದ ಸಾರ್ಥಕತೆ ಇರುವುದು ಸೇವೆಯಲ್ಲಿ. ಸೇವಾ ಹಿ ಪರಮೊ ಧರ್ಮಃ ಎಂಬಂತೆ ಸೇವೆ ಒಂದು ಕರ್ತವ್ಯ. ಕರ್ತವ್ಯ ಎಂದರೆ ಮಾಡಬೇಕಾದ್ದನ್ನು ಪ್ರಾಣ ಕೊಟ್ಟಾದರೂ ಮಾಡಬೇಕು, ಮಾಡಬಾರದ್ದನ್ನು ಪ್ರಾಣ ಹೋದರೂ ಮಾಡಬಾರದು. ಇದು ಪ್ರತಿಯೊಬ್ಬನ ಧರ್ಮ. ನಮ್ಮ ಜೀವನದ ಸಾರ್ಥಕತೆಗೋಸ್ಕರ ಸಮಾಜದ ಏಳಿಗೆಗೋಸ್ಕರ ಸೇವೆ ಮಾಡುವುದೆ ನಿಜವಾದ ಸೇವೆ. ಸಮಾಜ ಹಾಗಿದೆ, ಹೀಗಿದೆ ಎಂದು ಹೇಳಿದಾಗ ಸಮಾಜ ಪರಿವರ್ತನೆಯಾಗುವುದಿಲ್ಲ. ಕತ್ತಲೆ ಇದ್ದಲ್ಲಿ ಕತ್ತಲೆ ಇದೆಯೆಂದು ಹೇಳಿದರೆ ಸಾಲದು. ಅಲ್ಲಿ ಒಂದು ಸಣ್ಣ ದೀಪವನ್ನು ಬೆಳೆಗಿಸಿದಾಗ ಕತ್ತಲೆ ನಿಧಾನವಾಗಿ ಸರಿಯುತ್ತದೆ. ಅಜ್ಞಾನ ಎಂಬ ಸಮಾಜದ ಅಂಧಕಾರತ್ವವನ್ನು ಹೋಗಲಾಡಿಸಲು ನಾವೆಲ್ಲಾ ದೀಪಗಳಂತೆ ಮೇಲ್ಪಂಕ್ತಿಗಳಾಗಬೇಕಾಗುತ್ತದೆ, ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಹಿಂದು ಸೇವಾ ಪ್ರತಿಷ್ಠಾನದ ಮಹಿಳಾ ವಿಭಾಗದ ಸಂಚಾಲಕಿ ಭ॥ ಪ್ರತಿಭಾರವರು ನಿರ್ವಹಿಸಿದರು. ಕಾರ್ಯಕ್ರಮವು ಭ॥ ಲತಾರವರ ಪ್ರಾರ್ಥನೆಯಿಂದ ಪ್ರಾರಂಭವಾಗಿ ಶಾಂತಿ ಮಂತ್ರದೊಂದಿಗೆ ಮುಕ್ತಾಯವಾಯಿತು.

## ಅಮೃತಬಿಂದು

**ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ ।**
**ಫಲ ಮಾಗುವಂದು ತುತ್ತೂರಿ ದನಿಯಿಲ್ಲ ॥**
**ಬೆಳಕೀವ ಸೂರ್ಯ ಚಂದ್ರರದೊಂದು ಸದ್ದಿಲ್ಲ ।**
**ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ ॥**

ಭೂಮಿಯಲ್ಲಿ ಬಿತ್ತಿದ ಬೀಜ ಮೊಳಕೆಯೊಡೆಯುವಾಗ ಯಾರೂ ತಮಟೆ ಬಾರಿಸುವುದಿಲ್ಲ, ಮರಗಳು ಹಣ್ಣುಗಳನ್ನು ಕೊಡಲು ಪ್ರಾರಂಭಿಸಿದಾಗ ಯಾರೂ ತುತ್ತೂರಿ ಊದುವುದಿಲ್ಲ. ನಿತ್ಯ ಬೆಳಕುಕೊಡುವ ಸೂರ್ಯ ಚಂದ್ರರ ಯಾವ ಸದ್ದೂ ಇಲ್ಲ. ಅಂತೆಯೇ ನೀನು ಮಾಡುವ ಕೆಲಸಗಳಿಗೆ ಪ್ರಚಾರ ಬಯಸದೆ ಮೌನವಾಗಿರು.

## ಮಕ್ಕಳ ಬೇಸಿಗೆ ಶಿಬಿರ

ಮಕ್ಕಳಿಗಾಗಿ ತೀರ್ಥಹಳ್ಳಿಯ ಕುರುವಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಏಪ್ರಿಲ್ 1–5ರವರೆಗೆ ಹಾಗೆಯೇ ವಿಠಲ ನಗರದಲ್ಲಿ 6 ರಿಂದ 10ರವರೆಗೆ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಮಕ್ಕಳಿಗೆ ಕಥೆ, ಚಿತ್ರಕಲೆ, ವ್ಯಕ್ತಿತ್ವ ವಿಕಸನ, ಕರಕುಶಲ, ಗೋಸಂರಕ್ಷಣೆ ಕುರಿತು ಮಾಹಿತಿ ನೀಡಲಾಯಿತು. ಶಿಬಿರದ ಉದ್ಘಾಟನೆಯನ್ನು ಕುರುವಳ್ಳಿಯ ಪುರಪಂಚಾಯತ್ ಸದಸ್ಯರಾದ ಶ್ರೀಮತಿ ಲಕ್ಷ್ಮೀಯವರು ನೆರವೇರಿಸಿದರು. ತೀರ್ಥಹಳ್ಳಿಯ ಸುತ್ತಮುತ್ತಲ ಗ್ರಾಮದ ಶಾಲಾ ಮಕ್ಕಳು ಶಿಬಿರದ ಲಾಭ ಪಡೆದುಕೊಂಡರು.

ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸುಂದರವಾಗಿ ನಡೆಸಿಕೊಟ್ಟರು.

* * * * *

### ಓದುಗರ ಗಮನಕ್ಕೆ :

ತಮ್ಮ ಚಂದಾ ಅವಧಿ ಮುಗಿದಿದ್ದಲ್ಲಿ ರೂ. 50 ವಾರ್ಷಿಕ ಚಂದಾವನ್ನು ಮನಿಆರ್ಡರ್ ಮೂಲಕ "**ಅಜಿತಶ್ರೀ**" ಕಾರ್ಯಾಲಯಕ್ಕೆ ಕಳಿಸುವುದು. **ಸೇವಾದಿಶಾ** ಪ್ರಸಾರ ಸಂಖ್ಯೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಹೊಸಬರನ್ನು ಸಹ ಚಂದಾದಾರರನ್ನಾಗಿ ಮಾಡುವ ಪ್ರಯತ್ನದಲ್ಲಿ ತಮ್ಮ ಸಹಭಾಗಿತ್ವವು ದೊರೆಯಲಿ.

ಸಂಪಾದಕ

## ನಿರ್ದೇಶಕರ ನುಡಿ

# ನೆಲೆಯ ಸುಗಂಧ ಮನೆ ಮನೆಗೆ

ನೆಲೆಯ ಮಕ್ಕಳು ವರ್ಷಪೂರ್ತಿ ನಗರದಲ್ಲಿ ಆಶ್ರಮದ ವಾತಾವರಣದಲ್ಲಿಯೇ ಇರಬೇಕಾಗುತ್ತದೆ. ಬೇರೆ ಮಕ್ಕಳಾದರೆ ರಜೆ ಬಂತೆಂದರೆ ಅಜ್ಜನ ಮನೆ, ಮಾವನ ಮನೆ, ದೊಡ್ಡಮ್ಮ ಚಿಕ್ಕಮ್ಮನ ಮನೆ, ಅಕ್ಕನ ಮನೆಗಳಿಗೆ ಹೋಗುವುದು ಸಹಜ. ಅಲ್ಲಿ ಶಾಲೆ, ಮನೆಪಾಠ, ಹೋಂವರ್ಕ ಎಲ್ಲ ಮರೆತು ಪ್ರಕೃತಿಯೊಂದಿಗೆ ಒಂದಾಗಿ ನದಿ, ಗುಡ್ಡ, ಬೆಟ್ಟ, ಕಾಡಿನಲ್ಲಿ ಓಡಾಟ, ಹಲಸಿನಹಣ್ಣು, ಮಾವಿನ ಹಣ್ಣು ಇತ್ಯಾದಿ ರುಚಿ ನೋಡುವುದು, ಜಾತ್ರೆ, ಯಾತ್ರೆ, ಮದುವೆ ಮುಂಜಿ ಮನೆಗಳಲ್ಲಿ ಪಾಲ್ಗೊಳ್ಳುವುದು, ಬಸ್, ರೈಲಿನಲ್ಲಿ ಪ್ರಯಾಣ, ನಾನಾ ಬಗೆಯ ಅಡುಗೆಯ ರುಚಿ ನೋಡುವುದು, ಹೊಸ ಹೊಸ ಮಕ್ಕಳ ಸಂಪರ್ಕ, ಗೆಳೆತನ, ಅನುಭವ ಹಂಚಿಕೆ ಇದರಿಂದಾಗಿ ಜೀವನದ ಅನೇಕ ಮುಖಗಳ ಅನುಭವ ದರ್ಶನ. ಇಂತಹ ಗ್ರಾಮೀಣ ಸೊಗಡಿನ ಜೀವನ ಶಿಕ್ಷಣ ನೆಲೆಯ ಮಕ್ಕಳಿಗೂ ಸಿಗಬೇಕೆಂದು ಯೋಚಿಸಿ ಈ ವರ್ಷ ಆಯ್ದ 58 ಮಕ್ಕಳನ್ನು ಒಂದು ವಾರಗಳ ಕಾಲ ಸೇವಾವ್ರತಿಗಳ, ಹಿತೈಷಿಗಳ ಮನೆಗಳಿಗೆ ಕಳಿಸಿಕೊಡುವ ಪ್ರಯೋಗ ಮಾಡಲಾಯಿತು.

ದೂರದ ಬಾಗಲಕೋಟೆ ಜಿಲ್ಲೆಯ ಕೇರೂರು, ಧಾರವಾಡ ಜಿಲ್ಲೆಯ ಕೋಟನೂರು, ಉತ್ತರ ಕನ್ನಡದ ಸಿದ್ದಾಪುರ, ದಕ್ಷಿಣ ಕನ್ನಡದ ಮಲ್ಪೆ, ಕೋಟೇಶ್ವರ, ಪುತ್ತೂರು ಸಮೀಪದ ಕಲ್ಲಡ್ಕ, ಕಡಬ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಚಾಮರಾಜನಗರದ ಗುಂಡ್ಲುಪೇಟೆ ಮುಂತಾದ ಊರುಗಳಿಗೆ ಹೋದ ಮಕ್ಕಳಿಗೆ ಗ್ರಾಮೀಣ ಸೊಗಡಿನ, ಪ್ರೀತಿಯ ಅನುಭವ ಮರೆಯಲಾಗದ್ದು. ಪ್ರತಿ ಮನೆಗಳಲ್ಲೂ ಅಲ್ಲಿನ ಹಾಗೂ ಸುತ್ತಮುತ್ತಲಿನ ಮಕ್ಕಳ ಜೊತೆಗೆ ಆಟ ಪಾಠ, ಆ ಮನೆಯ ನಂತರ ಮನೆಗಳಿಗೆ ಓಡಾಟ, ಎಲ್ಲ ಮನೆಗಳಲ್ಲಿ ಸಿಕ್ಕಿದ ಸಹಜ ಪ್ರೀತಿ, ಕುಟುಂಬದ ಎಲ್ಲರ ಜೊತೆ ಅಕ್ಕ ಅಣ್ಣ ತಮ್ಮ ತಂಗಿ ಅಪ್ಪ ಅಮ್ಮ ಅಜ್ಜ ಅಜ್ಜಿ ಮಾವ ಭಾವಂದಿರ ಒಡನಾಟದಿಂದಾಗಿ ಪರಿವಾರದ ಸದಸ್ಯರಂತೆ ಆದ ಅನುಭವ ಅವಿಸ್ಮರಣೀಯ. ಗಂಡು ಮಕ್ಕಳ ನೆಲೆಯಲ್ಲಿರುವವರಿಗೆ ಅಕ್ಕ ತಂಗಿಯ ಪ್ರೀತಿ, ಹೆಣ್ಣು ಮಕ್ಕಳ ನೆಲೆಯವರಿಗೆ ಅಣ್ಣ ತಮ್ಮಂದಿರ ಸಹವಾಸ ಸಿಕ್ಕಿದ್ದು ವಿಶೇಷ ಪರಿಣಾಮ ಬೀರಿದೆ.

ಇನ್ನು ಪ್ರತ್ಯಕ್ಷ ಈ ಮಕ್ಕಳ ವ್ಯವಹಾರವಂತೂ ಮನೆಯವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ. ಅನೇಕ ಮಕ್ಕಳು ಮನೆಯವರಿಗಿಂತ ಮುಂಚೆ ಎದ್ದು ಸ್ನಾನ ಮಾಡಿ ಮನೆಯನ್ನು ಗುಡಿಸಿ, ಒರೆಸಿ, ಬಾಗಿಲಲ್ಲಿ ರಂಗವಲ್ಲಿ ಹಾಕಿ, ಪ್ರಾತಃಸ್ಮರಣೆ (ಬೆಳಗಿನ ಪ್ರಾರ್ಥನೆ) ಪೂಜೆ, ಯೋಗಾಸನ, ಊಟ ಮಾಡುವಾಗ ಭೋಜನ ಮಂತ್ರ, ಶ್ಲೋಕ, ಊಟದ ನಂತರ ತಮ್ಮ ತಟ್ಟೆ ಲೋಟ ತಾವೇ ತೊಳೆದುಕೊಂಡಿದ್ದು, ಸಂಜೆ ಭಜನೆ ಜೊತೆಗೆ ಮನೆಯಲ್ಲಿ ಅಡುಗೆ ಮಾಡಲು ಸಹಾಯ ಮಾಡಿದ್ದು ವಿಶೇಷವಾಗಿತ್ತು.

ಗುಂಡ್ಲುಪೇಟೆಗೆ ಹೋಗಿದ್ದ ಸೋಮಯ್ಯನಿಗೆ ನಿನ್ನ ಜಾತಿ ಯಾವುದು ಎಂದು ಕೇಳಿದಾಗ ನೀರು, ಗಾಳಿ, ಬೆಂಕಿ ಎಲ್ಲರಿಗೂ ಒಂದೇ ಅಲ್ಲವೇ? ಮತ್ತೆ ಜಾತಿ ಏಕೆ? ನಾವೆಲ್ಲ ಹಿಂದು ಅಷ್ಟೇ ಸಾಕು ಎಂದ.

ಈಡೂರಿಗೆ ಹೋಗಿದ್ದ ಸುರೇಶ, ಚರಣ, ಕೃಷ್ಣ ಇವರಿಂದ ಮನೆಯಲ್ಲಿನ ಬಾಲಕ ಏತಿ ಅಂದರೆ ಪ್ರೇತಿ ಎನ್ನುತ್ತಿದ್ದವನು ಇವರು ಊಟದ ನಂತರ ತಟ್ಟೆ ತೊಳೆಯುವುದನ್ನು ನೋಡಿ ತನ್ನ ತಟ್ಟೆ ತೊಳೆದುಕೊಂಡ, ಭಜನೆಗೆ ಕೂಡ ಇವರ ಜೊತೆ ಬಂದು ಸೇರುತ್ತಿದ್ದ.

ಧಾರವಾಡದ ಕೋಟನೂರಿಗೆ ಹೋಗಿದ್ದ ಚಂದ್ರು, ರಾಕೇಶ ಇಬ್ಬರು ಬರುವಾಗ ಬಸ್ ತಡವಾಗಿ ರಾತ್ರಿ 12 ಗಂಟೆಗೆ ಬೆಂಗಳೂರು ತಲುಪಿತು. ಕರೆದುಕೊಂಡು ಬರಲು ಹೋದವರಿಗೆ ಸಿಗಲಿಲ್ಲ. ಇಬ್ಬರೇ ಆಟೋದಲ್ಲಿ ಚಂದನ ನೆಲೆಗೆ ಬಂದಾಗ ಈ ಮಕ್ಕಳ ಬಗ್ಗೆ ತಿಳಿದ ಆಟೋ ಡ್ರೈವರ್ ಹಣ ಪಡೆಯದೆ, ಸುರಕ್ಷಿತವಾಗಿ ಇವರನ್ನು ನೆಲೆಗೆ ತಲುಪಿಸಿದ.

ಇಂತಹ ಅವಕಾಶ ವಂಚಿತ ಮಕ್ಕಳಿಗೆ ಸಂಸ್ಕಾರ ನೀಡಿ, ಅವರ ಜೀವನಕ್ಕೊಂದು ಬೆಳಕು ನೀಡುವ ಅವಕಾಶ ಪ್ರತಿಷ್ಠಾನಕ್ಕೆ ಸಿಕ್ಕಿದ್ದು ನಮ್ಮ ಭಾಗ್ಯ. ಹಾಗೆಯೇ ಪ್ರತಿಷ್ಠಾನದಿಂದ ಸಂಸ್ಕಾರ ಪಡೆಯುವ ಭಾಗ್ಯ ಸಿಕ್ಕಿದ್ದು ಮಕ್ಕಳ ಪುಣ್ಯವೆಂದೇ ಹೇಳಬಹುದು. ಮನೆ ಮನೆಗಳಲ್ಲಿ ನೆಲೆಯ ಸುಗಂಧವನ್ನು ಹರಡಿ ನೆಲೆ ಬಗ್ಗೆ ಹೆಮ್ಮೆ, ಅಭಿಮಾನ, ಪ್ರೀತಿ ಮೂಡಿಸಿ ಬಂದ ಮಕ್ಕಳೇ ನಿಮಗೆ ಅಭಿನಂದನೆಗಳು. ಇವರನ್ನು ಈ ರೀತಿ ತಯಾರು ಮಾಡಿರುವ ನೆಲೆಯ ಕಾರ್ಯಕರ್ತರಿಗೆ ಮನದಾಳದ ನಮನಗಳು.

**- ಶ್ರೀಧರ್ ಸಾಗರ್**

# ಪುಸ್ತಕದ ಪುಟಗಳಿಂದ

## ಶರೀರ ಶಿಲ್ಪ

ದಿ॥ ಅಜಿತ್‌ಕುಮಾರ್

**ಮರೆಯದೆ ಮಾಡಿ**

**ನಿತ್ಯದ ಆಹಾರದ ಜೊತೆಗೆ ಈ ತಯಾರಿಕೆಯನ್ನು ಸೇವಿಸಿ :**

ಅಕ್ಕಿ, ಗೋಧಿ, ರಾಗಿ, ಜೋಳ, ಕಡಲೆ, ಹೆಸರು, ಉದ್ದು ಈ ಧಾನ್ಯಗಳನ್ನು ಒಂದೇ ಅಳತೆಯಲ್ಲಿ ತೆಗೆದುಕೊಳ್ಳಿ. ಅವನ್ನು ಪ್ರತ್ಯೇಕವಾಗಿ ಕಂದು ಬಣ್ಣದವರೆಗೆ ಹುರಿದು ಪುಡಿ ಮಾಡಿ, ಎಲ್ಲವನ್ನೂ ಬೆರೆಸಿ, ಭರಣಿಯಲ್ಲಿ ಭದ್ರವಾಗಿಡಿ. ಅದೇ ರೀತಿ ಅಕ್ಕಿಯ ತೌಡನ್ನು(ಪಾಲಿಷ್ ತೌಡು) ಹುರಿದು ಪ್ರತ್ಯೇಕವಾಗಿ ಶೇಖರಿಸಿ. ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ಎರಡೆರಡು ದೊಡ್ಡ ಚಮಚದ ಧಾನ್ಯದ ಪುಡಿಯನ್ನು ಹಾಲು, ಸಕ್ಕರೆ, ತುಪ್ಪ ಮತ್ತು ಒಂದು ಚಮಚ ತೌಡಿನೊಂದಿಗೆ ಬೆರೆಸಿ ಚೆನ್ನಾಗಿ ಅಗೆದು ತಿನ್ನಿ.

ತೂಕ ಹೆಚ್ಚದೆ ವಿಧಿಯಿಲ್ಲ

ತೂಕ ಹೆಚ್ಚು ಮಾಡಲು ಬಯಸುವವರು ಒಂದು ದಿನಾಂಕ ನಿಶ್ಚಯಮಾಡಿ. ಅಂದಿನ ತೂಕ, ಅಳತೆ, ಬೇಕಾದರೆ ಒಂದು ಭಾವಚಿತ್ರವನ್ನು ದಾಖಲೆಗಾಗಿ ತೆಗೆದಿಡಿ. ಅವರವರ ಶರೀರ ಸ್ವಭಾವಕ್ಕನುಗುಣವಾಗಿ ಯೋಜನೆಯಂತೆ ತಪ್ಪದೆ ವ್ಯಾಯಾಮ ಮಾಡಿ. ಮೂರು ತಿಂಗಳನಂತರ ಪ್ರತಿ ವಾರವೂ ತೂಕ ನೋಡಿ. ಹೆಚ್ಚಿನ ತೂಕದ ಸುದ್ದಿಯನ್ನು ಸುತ್ತಲೂ ಸಾರಿ.

**ಎಚ್ಚರಿಕೆ:** ತೂಕವನ್ನು ಏರಿಸುವ ಉತ್ಸಾಹದಲ್ಲಿ ಅನವಶ್ಯಕ ಜಾಗಗಳಲ್ಲಿ ತೂಕ ಹೆಚ್ಚದಂತೆ ಜಾಗರೂಕರಾಗಿರಬೇಕು. ಕರಗದ ಕೊಬ್ಬು ಉದರದಲ್ಲಿ ಕಾಣಿಸಿಕೊಳ್ಳದಂತೆ ಪುರುಷರು ಎಚ್ಚರಿಕೆ ವಹಿಸಬೇಕು. ಮಹಿಳೆಯರಲ್ಲಿ ಮತ್ತೊಂದು ಸಮಸ್ಯೆ ಇದೆ. ಅವರ ಶರೀರ ರಚನೆಯಲ್ಲಿ ಮಾಂಸಖಂಡಗಳ ಒಟ್ಟು ರಾಶಿಗೂ ಇರುವ ಮೇದಸ್ಸಿಗೂ ಪ್ರಮಾಣ ಕಡಮೆ. ಅಂದರೆ ಮಾಂಸಖಂಡಗಳು ಬೆಳೆಯುವ ಪ್ರಮಾಣಕ್ಕಿಂತ ಶೀಘ್ರವಾಗಿ ಮೇದಸ್ಸು ಹೆಚ್ಚುವುದು. ಅದರಿಂದ ಇದರ ಕಡೆ ಗಮನವಿರುವುದು ಉಚಿತ.

ಸೂತ್ರ: ಮನಸ್ಸನ್ನು "ಹಗುರ" ಮಾಡಿ – ಶರೀರ ಭಾರವಾಗುವುದು.

6. ವ್ಯಾಯಾಮವಿಲ್ಲದೆಯೆ ವ್ಯಾಯಾಮ

ಕೆಲವು ಬಗೆಯ ವಿಶೇಷ ವ್ಯಾಯಾಮ ಮಾಡಿ ಶರೀರದ ಮೇಲ್ಮೈ ಲಕ್ಷಣಗಳನ್ನು ಬದಲಿಸಿ, ಎದ್ದುಕಾಣುವ ಮಾಂಸಖಂಡಗಳನ್ನು ಪಡೆದಿರುವವರು ಅಪರೂಪವೇನಲ್ಲ. ಅಲ್ಪ ಸಮಯದಲ್ಲೇ ಸುರುಳಿ ಸುರುಳಿಯಾಗಿ ಮಾಂಸಖಂಡಗಳನ್ನು ಬೆಳೆಸಿದವರೂ ಅನೇಕರು.

ಆದರೆ ಇಂತಹ ತೋರಿಕೆಯ ದೃಢಕಾಯರಲ್ಲಿಯೂ ಹೃದಯಾಘಾತವಾಗಿ ಅಕಾಲ ಮರಣಕ್ಕೆ ಈಡಾದ, ರೋಗರುಜಿನಗಳಿಗೆ ತುತ್ತಾಗಿ ನರಳುವವರ ಸಂಖ್ಯೆಯೂ ವಿರಳವೇನಲ್ಲ. ಎಲ್ಲಿಯವರೆಗೆ ಅವರ ಉಪಕರಣಗಳು ಉಪಯೋಗ ಆಗುತ್ತಿರುವುವೋ ಅಲ್ಲಿಯವರೆಗೆ ಮಾತ್ರ ಇವರ ಸುರಳಿಗಳು ಇರುತ್ತವೆ. ವ್ಯಾಯಾಮ ಕೆಲಕಾಲ ನಿಂತ ಕೂಡಲೇ ಇವರ ಶರೀರವೂ ಸೊರಗುವುದು. ಇವರು ಗಳಿಸಿದ ಶರೀರಶಕ್ತಿ ಯಾವುದೋ ಹೊದಿಕೆ ಇದ್ದಂತೆ ಅಥವಾ ಬಣ್ಣ ಬಳಿದಂತೆ ಕಳಚಿಹೋಗುವುದು.

ನಿತ್ಯ ವ್ಯಾಯಾಮ ಮಾಡುವ ಅನೇಕರಲ್ಲಿ ವ್ಯಾಯಾಮದಿಂದ ಅಪೇಕ್ಷಿಸಲಾದ ಸಂಗತಿಗಳು ಗಳಿಕೆಯೇ ಆಗುವುದಿಲ್ಲ – ಶಕ್ತಿ, ದೃಢತೆ, ತಡೆತ ಮುಂತಾದವು. ಇದಕ್ಕೆ ಅನೇಕ ಮಿತಿಗಳುಂಟು. 15 ರಿಂದ 20 ನಿಮಿಷಗಳು ಮಾಡಿದ ವ್ಯಾಯಾಮದಿಂದ ಕೂಡಿಬರುವ ಶಕ್ತಿ ದಿನವಿಡೀ ಶರೀರವು ಜೀವನ ಸಂಘರ್ಷದಲ್ಲಿ ವ್ಯಯಿಸುವ ಶಕ್ತಿಗೆ ಹೋಲಿಸಿದರೆ ಅತ್ಯಲ್ಪ.

ಜೊತೆಗೆ ಆ ಅಲ್ಪ ಸಮಯದಲ್ಲಿ ಕೇವಲ ಕೆಲವು ಮಾಂಸಖಂಡಗಳ ಗುಂಪಿಗೆ ವ್ಯಾಯಾಮ ಲಭಿಸಬೇಕಾದರೆ ಅದಕ್ಕೇ ಅನೇಕ ಗಂಟೆಗಳನ್ನು ದಿನದಲ್ಲಿ ಮೀಸಲಾಗಿಡಬೇಕಾದೀತು. ಆದರೆ ನಿತ್ಯ ಜೀವನದಲ್ಲಿ ಸಮಯಕ್ಕೂ ಮಿತಿ ಇದೆ. ಹೀಗಾಗಿ ಅನೇಕರಲ್ಲಿ ವ್ಯಾಯಾಮ ಶರೀರವನ್ನು ಬೆಳೆಸಿ ಉಳಿಸುವ ಸಾಧನವಾಗಿರದೆ ಕೇವಲ ಆರೋಗ್ಯ ಕೆಡದಂತೆ ಇಡಲು ಮುನ್ನೆಚ್ಚರಿಕೆಯ ಸಂಗತಿಯಾಗಿಯೇ ಉಳಿದಿದೆ.

ಇದಕ್ಕೆ ವಿಪರೀತವಾಗಿ ಅನೇಕ ಉದಾಹರಣೆಗಳೂ ದೊರೆಯುವುದುಂಟು. ಕೆಲವು ವ್ಯಕ್ತಿಗಳು ಎಂದೂ ತಾವಾಗಿಯೇ ಔಪಚಾರಿಕವಾದ ಯೋಗ ಪ್ರಯೋಗಗಳಿಂದೊಡಗೂಡಿದ ವ್ಯಾಯಾಮಗಳನ್ನು ಮಾಡದೆ ಇದ್ದಾಗ್ಯೂ ಸಹ ಆರೋಗ್ಯವಂತರಾಗಿ, ದೃಢಕಾಯರಾಗಿ, ಜೀವನಸಂಗ್ರಾಮದಲ್ಲಿ ಇದಿರು ಬರುವ ಎಲ್ಲ ಪ್ರಸಂಗಗಳನ್ನೂ ಯಶಸ್ವಿಯಾಗಿ ಎದುರಿಸುವ ದಷ್ಟಪುಷ್ಟವಾದ ಮೈಕಟ್ಟನ್ನು ಪಡೆದಿರುವವರು. ಇವರ ಶಕ್ತಿ ಯಾವುದೇ ಋತುವಿಶೇಷಗಳಿಂದ ವ್ಯತ್ಯಾಸ ಆಗದೆ ಉಳಿಯುವಂತಹದು. ತಾತ್ಕಾಲಿಕ ಏರಿಳಿತಗಳಿಂದ ದೂರವಾದದ್ದು. ಇವರ ಆರೋಗ್ಯ ಮತ್ತು ಸೌಷ್ಠವ ಯೌವನ ದಾಟಿದರೂ ಉಳಿಯುವಂತಹದು.

ಹಾಗಾದರೆ ಈ ವ್ಯತ್ಯಾಸಕ್ಕೆ ಕಾರಣವೇನು? ವ್ಯಾಯಾಮ ಮಾಡದೆ ಇದ್ದರೂ ಜೀವನವಿಡೀ ಆರೋಗ್ಯವಾಗಿ ದೃಢಕಾಯರಾಗಿರುವುದರ ರಹಸ್ಯವೇನು?

ವ್ಯಾಯಾಮ ಮಾಡಿಯೂ ದೃಢಕಾಯರಾಗಿಲ್ಲದಿರುವುದರ ಗುಟ್ಟೇನು?

ಕೆಲವು ತಜ್ಞರು ಈ ರೀತಿಯ ನೂರಾರು ವ್ಯಕ್ತಿಗಳ ಸೂಕ್ಷ್ಮ ಅವಲೋಕನ ಮಾಡಿ ಕಂಡುಬಂದ ಸಂಗತಿಗಳನ್ನು ಜೋಡಿಸಿ ಕೆಲವು ನಿಷ್ಕರ್ಷೆಗಳಿಗೆ ಬಂದು ಮುಟ್ಟಿದ್ದಾರೆ.

ನೈಸರ್ಗಿಕವಾಗಿ ದೃಢವಾಗಿರುವವರಲ್ಲಿ ಕೆಲವು ಸಮಾನ ಅಭ್ಯಾಸಗಳಿರುತ್ತವೆ. ದಿನವಿಡೀ ಅವರ ಶರೀರದ ಚಲನವಲನಗಳಲ್ಲಿ ಒಂದು ರೀತಿ ಸಮಾನತೆ ಎದ್ದು ಕಾಣುತ್ತದೆ. ಅವರ ನಿಲುವು, ನಡಿಗೆ, ಕುಳಿತುಕೊಳ್ಳುವುದು, ಉಸಿರಾಟಗಳಲ್ಲಿ ಸಾಮ್ಯತೆಯೇ ಹೆಚ್ಚು. ವ್ಯಾಯಾಮ ಮಾಡಿಯೂ ಸೊರಗುವ ವ್ಯಕ್ತಿಗಳಲ್ಲಿ ಈ ರೀತಿ ಸಾಮ್ಯ

5ನೇ ಪುಟಕ್ಕೆ

# ಸಂಸ್ಕೃತ ಶಿಕ್ಷಕ ಪ್ರಶಿಕ್ಷಣ ವರ್ಗ

– ನಾಗರಾಜ್‌ಭಟ್

**ರಾಮಚಂದ್ರಾಪುರ ಮಠ :–** ಸಂಸ್ಕೃತದಲ್ಲಿ ಮಾತನಾಡಲು ಕಲಿಸುವ "ಸಂಸ್ಕೃತ ಸಂಭಾಷಭಾಷಣ ಶಿಬಿರ" ಇಂದು ಜನಜನಿತ. ಸೇವಾಬಸ್ತಿಯಿಂದ ಸಂಸತ್ತಿನವರೆಗೂ, ವಿದೇಶಗಳಲ್ಲಿಯೂ ಈ ಶಿಬಿರಗಳ ಮೂಲಕ ಹಲವರು ಸ್ವಲ್ಪ ಸಂಸ್ಕೃತ ಕಲಿತಿದ್ದಾರೆ ಆ ಮೂಲಕ ಸಂಸ್ಕೃತ ಸರಳ, ಎಲ್ಲರೂ ಕಲಿಯಬಹುದು ಎಂಬ ಸತ್ಯ ಅರಿತುಕೊಂಡಿದ್ದಾರೆ.

ಈ ನಿಟ್ಟಿನಲ್ಲಿ ಸಂಸ್ಕೃತ ಭಾರತಿಯ ಪ್ರಯತ್ನ ನಿರಂತರ ಸಾಗಿದೆ.

ಸಂಭಾಷಣ ಶಿಬಿರಗಳನ್ನು ಇನ್ನೂ ವ್ಯಾಪಾಕವಾಗಿ ಮಾಡಬೇಕು. ಬೇಡಿಕೆ ಹೆಚ್ಚಿದೆ, ಆದರೆ ಶಿಕ್ಷಕರ ಕೊರತೆ ಇದೆ. ಶಿಕ್ಷಕರ ಕೊರತೆಯನ್ನು ಕಡಿಮೆ ಮಾಡಲು ಪ್ರತಿವರ್ಷ ದೇಶದಾದ್ಯಂತ ಸಂಸ್ಕೃತ ಭಾರತಿ ಸಂಸ್ಕೃತ ಶಿಕ್ಷಕ ಪ್ರಶಿಕ್ಷಣವರ್ಗಗಳನ್ನು ಹಮ್ಮಿಕೊಳ್ಳುತ್ತದೆ. ಕಳೆದವರ್ಷ ದೇಶದ 30 ಪ್ರಾಂತಗಳಲ್ಲಿ ಈ ವರ್ಗಗಳು ನಡೆದಿವೆ. ಸುಮಾರು 5 ಸಾವಿರ ಜನ ವರ್ಗಾರ್ಥಿಗಳಾಗಿ ಪಾಲ್ಗೊಂಡಿದ್ದರು.

ಈ ವರ್ಷ ಕರ್ನಾಟಕ ದಕ್ಷಿಣ ಪ್ರಾಂತದ ವರ್ಗ ಹೊಸನಗರದ ರಾಮಚಂದ್ರಾಪುರ ಮಠದ ಶ್ರೀ ಭಾರತಿ ಗುರುಕುಲ ಪರಿಸರದಲ್ಲಿ ನೆರವೇರಿತು. 18 ಜಿಲ್ಲೆಗಳಿಂದ 102 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳು, ಗೃಹಿಣಿಯರು, ಸಾಫ್ಟ್‌ವೇರ್ ತಂತ್ರಜ್ಞರು, ಅಧ್ಯಾಪಕರು, ವ್ಯಾಪಾರಸ್ಥರು, ವಿದೇಶಗಳಿಂದಲೂ ಇನ್ನು ಹಲವು ವಿಧದ ಜನರು ಭಾಗವಹಿಸಿ ಶಿಕ್ಷಣ ಪಡೆದರು.

ಗುರುಕುಲದ 180 ಮಕ್ಕಳಿಗೆ ಸಂಸ್ಕೃತ ಶಿಕ್ಷಣಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವರ್ಗದ 5ನೇ ದಿನವೇ ಅಕ್ಷರಶಃ ಗುರುಕುಲ ಸಂಸ್ಕೃತಮಯವಾಗಿತ್ತು. ಗುರುಕುಲದ ಪ್ರಾಚಾರ್ಯರು ವರ್ಗಾಧಿಕಾರಿಯೂ ಆದ ಶ್ರೀ ಜಗದೀಶ ಶರ್ಮರು ಗುರುಕುಲದಲ್ಲಿ ಸಂಸ್ಕೃತ ವಾತಾವರಣ ತರಬೇಕೆಂಬ ನಮ್ಮ ಕನಸು ಇಂದು ನನಸಾಯಿತು ಎನ್ನುವಾಗ, ಅವರ ಕಣ್ಣಿನಲ್ಲಿ ಸಾರ್ಥಕತೆಯ ಭಾವತುಂಬಿತ್ತು.

ಬೆಳಿಗ್ಗೆ 5ರಿಂದ ರಾತ್ರಿ 10ರ ವರೆಗೆ ಬಿಡುವಿಲ್ಲದೆ ನಡೆಯುವ ಈ ವರ್ಗದಲ್ಲಿ 10 ದಿನಗಳನಂತರ ಸಂಭಾಷಣ ಶಿಬಿರ ನಡೆಸುವ ಶಿಕ್ಷಕರಾಗುತ್ತಾರೆ. ಆದರ್ಶ ಸಂಭಾಷಣ ಶಿಬಿರವನ್ನು ವರ್ಗಾರ್ಥಿಗಳಿಗೆ ತೋರಿಸಿ ಅವರಿಂದ ಅಭ್ಯಾಸ ಶಿಬಿರವನ್ನು ಮಾಡಿಸಲಾಗುತ್ತೆ. ಮುಂದೆ ಅವರ ಊರುಗಳಲ್ಲಿ ಯಾವಾಗ ಶಿಬಿರಗಳನ್ನು ಮಾಡುತ್ತಾರೆ ಎಂಬ ಯೋಜನೆಯನ್ನು ಮಾಡುತ್ತಾರೆ. ಇದಕ್ಕೆ ಪೂರಕವಾಗಿ ಸ್ವಲ್ಪ ವ್ಯಾಕರಣ ಮತ್ತು ಸಂಭಾಷಣ ಶಿಬಿರ ಶಿಕ್ಷಕರು ಹೇಗಿರಬೇಕು, ಸಂಸ್ಕೃತಭಾರತಿಯ ಕಾರ್ಯಪದ್ಧತಿ, ಸಂಘಟನೆಯ ಲಕ್ಷ್ಯ, ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆನಡೆಯುತ್ತದೆ.

2009 ಏಪ್ರಿಲ್ 14ರಿಂದ ಆರಂಭವಾಗಿ 25ರ ಬೆಳಿಗ್ಗೆ ದೀಕ್ಷಾಂತ ಕಾರ್ಯಕ್ರಮದೊಂದಿಗೆ ಮುಕ್ತಾಯವಾಯಿತು. ರಾಜ್ಯದ ವಿವಿಧ ಭಾಗಗಳಿಂದ 25 ಪ್ರಶಿಕ್ಷಕ ಪ್ರಬಂಧಕರು ಶಿಕ್ಷಣ – ವ್ಯವಸ್ಥೆ ಸಾಂಗವಾಗಿ ನಡೆಯುವಂತೆ ನೋಡಿಕೊಂಡರು. ಇವರ ದಿನಚರಿ ಬೆಳಿಗ್ಗೆ 4.30ರಿಂದ ರಾತ್ರಿ 1.00 ರ ವರೆಗೆ ಇರುತ್ತಿತ್ತು.

ಕೊನೆಯದಿನ ದೀಕ್ಷಾಂತ ಕಾರ್ಯಕ್ರಮ ಬೆಳಿಗ್ಗೆ 5.30ಕ್ಕೆ ನಡೆಯಿತು. ಭಾರತಮಾತೆಯ ಸಮಕ್ಷಮ ದೀಪ ಬೆಳಗಿಸುವ ಮೂಲಕ ಎಲ್ಲ ಶಿಕ್ಷಾರ್ಥಿಗಳು ಸಂಸ್ಕೃತ ಸೇವಾದೀಕ್ಷೆಯನ್ನು ತೊಟ್ಟರು.

* * * * *

**4ನೇ ಪುಟದಿಂದ**

ಕಾಣದೆ ದಿನವಿಡೀ ಅವರ ಚಲನೆಗಳಲ್ಲಿ ಅನಿರ್ದಿಷ್ಟತೆಯೇ ಕಾಣುವುದು.

ಅಂದಮೇಲೆ ನಿಲುವು, ನಡಿಗೆ, ಉಸಿರಾಟಗಳನ್ನು ಯೋಗ್ಯ ರೀತಿಯಲ್ಲಿ ಮಾಡಿದರೆ ದಿನವಿಡೀ ಜೀವನವಿಡೀ ಶಕ್ತಿ ಉಳಿಸಿಕೊಳ್ಳಬಹುದು. ಸಲ್ಲದ ರೀತಿಯಲ್ಲಿ ಆಚರಿಸಿದರೆ ಶಕ್ತಿಯ ಹ್ರಾಸ ಆಗುವುದು. 15–20 ನಿಮಿಷಗಳು ವ್ಯಾಯಾಮ ಮಾಡಿ, ದಿನವಿಡೀ 10–12 ಗಂಟೆಗಳು ಸಲ್ಲದ ಚಟುವಟಿಕೆಗಳನ್ನು ನಡೆಸಿದ ವ್ಯಕ್ತಿಯು ದೃಢಕಾಯನಾಗಿ ಹೇಗೆ ತಾನೇ ಇರಬಲ್ಲನು? ವಾರವೆಲ್ಲಾ ಪಾಪಗಳನ್ನು ಮಾಡುತ್ತಾ ವಾರಾಂತ್ಯದಲ್ಲಿ ಕೆಲವು ಕ್ಷಣ ಪರಮಾತ್ಮನನ್ನು ಪ್ರಾರ್ಥಿಸಿ ಪಾಪಮುಕ್ತನಾದಂತೆ! ಅಲ್ಪ ಸಮಯದ ವ್ಯಾಯಾಮ ಮಾಡದೆ ಇದ್ದರೂ ದಿನವಿಡೀ ಯೋಗ್ಯ ಚಟುವಟಿಕೆ ಮಾಡುತ್ತಿರುವ ವ್ಯಕ್ತಿಗೆ ಶಕ್ತಿ ಮೂಡಿಬಂದು ದೃಢಕಾಯನಾಗಿರಲೂ ಬಲ್ಲ.

ನಿರಂತರವಾದ, ಕ್ರಮವಾದ ವ್ಯಾಯಾಮ ನೀಡುವ ರಚನಾತ್ಮಕ ಅಂಶಗಳು ನಿಲುವು, ನಡಿಗೆ, ಉಸಿರಾಟ, ಕುಳಿತುಕೊಳ್ಳುವುದರಲ್ಲಿ ಕೂಡಿಕೊಂಡಿವೆ.

ಅಂಚೆಯವನು ನಿತ್ಯ ಅನೇಕ ಗಂಟೆಗಳು ನಡಯುತ್ತಾನೆ. ಅಂತೆಯೇ ಗಗನಸಖಿಯೂ ಮಾಡುತ್ತಾಳೆ. ಒಬ್ಬ ವ್ಯಾಪಾರಿ 8–10 ಗಂಟೆಗಳು ಅಂಗಡಿಯಲ್ಲಿ ಕುಳಿತಿರುತ್ತಾನೆ. ಕಾರ್ಮಿಕ ಪ್ರತಿದಿನ 8 ಗಂಟೆ ನಿಂತಿರುತ್ತಾನೆ. ಇವರೆಲ್ಲರೂ ಏಕೆ ದೃಢಕಾಯರಾಗಿಲ್ಲ? ಈ ಕ್ರಿಯೆಗಳನ್ನು ಇವರು ಯತ್ನವಿಲ್ಲದೆ, ಅಪರಿಹಾರ್ಯವಾಗಿ ಮಾಡುತ್ತಾರೆ. ಅದರಿಂದ ಈ ಕ್ರಿಯೆಗಳು ಇವರ ಭಾಗಕ್ಕೆ ಹೊರೆಯೇ ಹೊರತು 'ವರ'ವಾಗಿಲ್ಲ.

ಹಾಗಾದರೆ ಈ ಕ್ರಿಯೆಗಳ ಕಲೆ ಏನು? ಹೊರೆಯಾಗಿ ಕಾಣುವ ಈ ಕ್ರಿಯೆಗಳನ್ನು "ವರ"ವಾಗಿ ಮಾಡಿಕೊಳ್ಳುವ ವಿಧಾನ ಯಾವುದು?

**ಮುಂದುವರೆಯುವುದು .......**

## ಗಮನಕ್ಕೆ

ಮೇ 20ರಿಂದ 30ರ ವರೆಗೆ ರಾಮನಗರ ಜಿಲ್ಲೆಯ ಅರ್ಚಕರ ಹಳ್ಳಿಯಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಅಂಧರ ಶಾಲೆಯಲ್ಲಿ ಮಹಿಳಾ ಸೇವಾವ್ರತಿಗಳ ಪ್ರಾಥಮಿಕ ತರಬೇತಿ ಶಿಬಿರ ನಡೆಯುತ್ತದೆ.

**ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಿ : ಭಗಿನಿಪ್ರತಿಭಾ : 94803 16624, 080–26608926**

# 'ನೆಲೆ'ಯ ಮಕ್ಕಳು ಹಿತೈಷಿಗಳ ಮನೆಗೆ ಹೋದಾಗ

ಜೀವನದಲ್ಲಿ ನೆಲೆ ಎಲ್ಲರಿಗೂ ಅವಶ್ಯ ಬೇಕೆ ಬೇಕು. ನೆಲೆ ಸಿಕ್ಕ ನಂತರ ಮುಂದಿನ ಆಲೋಚನೆಗಳು ಬರುತ್ತವೆ. ನಮ್ಮ "**ನೆಲೆ**" ಪ್ರಕಲ್ಪ ಪ್ರಾರಂಭವಾಗಿ ಒಂಭತ್ತು ವರ್ಷಗಳು ಕಳೆಯುತ್ತಿವೆ. ಬೆಂಗಳೂರಿನಲ್ಲಿ 6 ಕೇಂದ್ರಗಳು, ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಒಂದೊಂದು ಕೇಂದ್ರ ನಡೆಯುತ್ತಿವೆ. ಸುಮಾರು 200 ಮಕ್ಕಳು ಆಶ್ರಯ ಪಡೆದಿದ್ದಾರೆ. ಅವರ ಸರ್ವತೋಮುಖ ಬೆಳವಣಿಗೆಗೆ ಹಲವು ರೀತಿಯ ಪ್ರಯತ್ನಗಳು ನಡೆದಿವೆ. ಕಳೆದೆರಡು ವರ್ಷಗಳ ಕೆಳಗೆ ಆಲೋಚನೆಯೊಂದು ಬಂದಿತ್ತು. ಮಕ್ಕಳಿಗೆ ಮನೆವಾತಾವರಣ ಕಲ್ಪಿಸಿಕೊಡಬೇಕು ಎಂದು; ಆಲೋಚನೆ ಬಂದ ಮೇಲೆ ಕಾರ್ಯಗತವಾಗಬೇಕಿತ್ತು. ಆದರೆ 200 ಮಕ್ಕಳಿಗೆ ವ್ಯವಸ್ಥೆ ಆಗಬೇಕಲ್ಲ? ಅದು ದೊಡ್ಡ ಕೆಲಸವೇ? ಸಮಯ ಮತ್ತು ಇತ್ಯಾದಿ ಕಾರಣಗಳಿಂದ ಕಳೆದ ಬಾರಿ ಒಂದರೆಡು ಮನೆಗಳಲ್ಲಿ ಮಾತ್ರ ಮಕ್ಕಳು ಉಳಿದಿದ್ದರು. ಅನುಭವ ಚೆನ್ನಾಗಿತ್ತು. ಮಕ್ಕಳನ್ನು ಮನೆಗಳಲ್ಲಿ ಉಳಿಸುವ ಅಲೋಚನೆ ಇನ್ನು ಹಸಿಯಾಗಿಯೇ ಉಳಿದಿತ್ತು. ಹಾಗಾಗಿ ಈ ವರ್ಷವು ಪ್ರಯತ್ನ ಸಾಗಿತು. ಅಷ್ಟು ಮಕ್ಕಳ ಪೈಕಿ 56 ಮಕ್ಕಳನ್ನು ಸಾಮೂಹಿಕವಾಗಿ ಮನೆಗಳಲ್ಲಿ ಉಳಿಸುವ ಎಂದುಕೊಂಡೆವು. ಕಳುಹಿಸುವುದು ಹೇಗೆ ಏನೋ ಎಂದು ಹಲವು ಬಾರಿ ಯೋಚಿಸಿದೆವು. ಮಕ್ಕಳು ಭಿನ್ನ ರೀತಿಯ ವಾತಾವರಣದಲ್ಲಿ ಬೆಳೆದವರು. ಕಲ್ಪನೆ ಒಳ್ಳೆಯದೆ ಕಲ್ಪನೆಯನ್ನು ಆಚರಣೆಗೆ ತರುವಾಗ ಸಮಸ್ಯೆಗಳು ಎದುರಾಗುತ್ತವೆ. ಈ ಮಕ್ಕಳು ಮನೆಗಳಿಗೆ ಹೊಂದಿಕೊಳ್ಳಬೇಕು. ಮನೆಯವರು ಈ ಮಕ್ಕಳಿಗೆ ಹೊಂದಿಕೊಳ್ಳಬೇಕು. ನಂತರ ಶಿವಮೊಗ್ಗದಲ್ಲಿ ನಡೆಯುವ ಮಹಿಳಾ ಸೇವಾವ್ರತಿಗಳ ವಾರ್ಷಿಕ ಬೈಠಕ್‌ಗೆ ಮಕ್ಕಳನ್ನು ಕಳುಹಿಸುವುದು, ಅಲ್ಲಿಂದ ಎಲ್ಲರನ್ನು ಮನೆಗಳಿಗೆ ಕರೆದುಕೊಂಡು ಹೋಗುವುದು ಎಂದು ನಿಶ್ಚಯವಾಯಿತು. ಬೆಂಗಳೂರು ಪಟ್ಟಣ ಬಿಟ್ಟು ಪ್ರಾಂತದ ಬೇರೆ ಕಡೆಗಳಲ್ಲಿ ಉಳಿಸುವುದು; ಸೇವಾವ್ರತಿ ಭಗಿನಿಯರು, ಆಡಳಿತ ಮಂಡಳಿ ಸದಸ್ಯರು, ಪ್ರತಿಷ್ಠಾನದ ಹಿತೈಷಿಗಳು, ಸಂಘದ ಸ್ವಯಂಸೇವಕರ ಮನೆಗಳಲ್ಲಿ ಕನಿಷ್ಠ ಒಂದು ವಾರದ ಮಟ್ಟಿಗೆ ಉಳಿದಿದ್ದರು. ಮಕ್ಕಳಿಗೂ, ಮನೆಯವರಿಗೂ ಬಹಳ ಆನಂದವಾಗಿದೆ. ಪ್ರಾರಂಭದಲ್ಲಿನ ದುಗುಡ ಮಾಯವಾಗಿದೆ. ಈ ಪ್ರಯೋಗ ಮುಂದಿನ ವರ್ಷಗಳಲ್ಲಿ ಹೊಸ ಆಯಾಮವೇ ಪಡೆದುಕೊಳ್ಳಬಹುದು ಎಂದೆನಿಸಿದೆ. ತಾವುಗಳು ಪ್ರತಿಷ್ಠಾನದ ಅಪೇಕ್ಷೆಯಂತೆ ಮಕ್ಕಳನ್ನು ಮನೆಗಳಲ್ಲಿ ಉಳಿಸಿಕೊಳ್ಳುವುದು ಕರ್ತವ್ಯವೆಂಬಂತೆ ಸ್ವೀಕರಿಸಿದ್ದೀರಿ. ಈ ಪ್ರಯೋಗಕ್ಕೆ ತಾವುಗಳು ಉದಾರವಾಗಿ ಸ್ಪಂದಿಸಿ ನಮಗೆ ಉತ್ಸಾಹ ತುಂಬಿದ್ದೀರಿ. ಕಾರ್ಯಕ್ಕೆ ಮತ್ತಷ್ಟು ಶಕ್ತಿ ತುಂಬಿದ್ದೀರಿ. ನಿಮಗೆ ಅನಂತ ಧನ್ಯವಾದಗಳು. ಸಾಮಾಜಿಕ ಪರಿವರ್ತನೆಯ ಕಾರ್ಯದಲ್ಲಿ ಲಕ್ಷಾಂತರ ಕೈಗಳು ಜೊತೆಗೂಡಿದಾಗ ಸೇವಾ ಕಾರ್ಯ ಮತ್ತಷ್ಟು ರಭಸವಾಗಿ ಮುಂದುವರೆಯುತ್ತದೆ ಎಂಬ ವಿಶ್ವಾಸ ನಮ್ಮದು.

ಮಕ್ಕಳನ್ನು ಮನೆಗಳಿಗೆ ಕಳುಹಿಸುವಾಗ ಮಕ್ಕಳಿಗೆ ಮತ್ತು ಮನೆಯವರಿಗೆ ತಮ್ಮ ಅನುಭವಗಳನ್ನು ಬರೆದುಕೊಟ್ಟರೆ ಉತ್ತಮ ಎಂದು ತಿಳಿಸಿದ್ದೆವು. ಹಲವು ನಮ್ಮ ಸೋದರ ಸೋದರಿಯರು ಅನುಭವ ಹಂಚಿಕೊಂಡಿದ್ದಾರೆ. ಯಥಾವತ್ತಾಗಿ ನಿಮ್ಮ ಮುಂದೆ ಇಟ್ಟಿದ್ದೇವೆ. ಓದಿ ಆನಂದಿಸಿ. ಓದುಗರು ಪ್ರತಿಸ್ಪಂದಿಸಿದರೆ ಬಹಳಷ್ಟು ಅನುಕೂಲವಾಗುತ್ತದೆ.

## ಮನೆಮಂದಿಯ ಅನಿಸಿಕೆಗಳು :

ಏಪ್ರಿಲ್ ತಿಂಗಳಲ್ಲಿ 7 ದಿನಗಳ ಕಾಲ ನೆಲೆ ನಮ್ಮ ಮನೆಯ 8 ಮಕ್ಕಳನ್ನು ಚಾಮರಾಜ ನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ನಾಲ್ಕೈದು ಗ್ರಾಮಗಳಲ್ಲಿ ಉಳಿಸಲಾಗಿತ್ತು. ಸಾಮಾನ್ಯ ವರ್ಗದ ಮನೆಗಳಲ್ಲಿ ಈ ಮಕ್ಕಳು ಊಹೆ ಮಾಡಿಕೊಳ್ಳಲಾರದಷ್ಟು ಪರಿಣಾಮ ಉಂಟುಮಾಡಿದರು.

ಸಣ್ಣ ಪುಟ್ಟ ಕೆಲಸಗಳನ್ನು ಮಾಡುವಾಗಲೂ ಜಾತಿ ಭೇದ ಮಾಡುವ ಆ ಮನೆಯನ್ನೇ ಬದಲಾಯಿಸಿದರು ನಮ್ಮ ಮನೆಯ ಮಕ್ಕಳು. ಪ್ರತಿದಿನ ಬೆಳಿಗ್ಗೆ ಸ್ನಾನ, ಪೂಜೆ, ಊಟ ಮಾಡುವಾಗ ಹೇಳುತ್ತಿದ್ದ ಮಂತ್ರಗಳು, ಇಬ್ಬರೇ ಆದರೂ ಸಂಜೆ ಮಾಡುತ್ತಿದ್ದ ಭಜನೆಗಳು, ಶಿಸ್ತು, ಮಾತಿನ ವೈಖರಿ, ಚುರುಕುತನ, ವ್ಯವಹಾರಿಕ ಜ್ಞಾನ, ಇವೆಲ್ಲಾ ಒಂದು ಮನೆಯ ಎಲ್ಲಾ ವ್ಯಕ್ತಿಗಳನ್ನು ಅಚ್ಚರಿ ಮೂಡಿಸುತ್ತದೆ ಎಂದು ನಿಜಕ್ಕೂ ತಿಳಿದಿರಲಿಲ್ಲ.

ಮನೆಯ ಕೆಲಸಗಳಲ್ಲಿ ಸಹಕರಿಸಿ, ಅಡುಗೆಯಲ್ಲಿ ಸಹಾಯ ಮಾಡಿ, ಇತರೆ ಎಲ್ಲ ಕೆಲಸಗಳನ್ನು ಮಾಡಲು ಮುಂದಾಗುತ್ತಿದ್ದರು.

ಒಟ್ಟಾರೆ ಅಭಿಪ್ರಾಯವೆಂದರೆ ಧರ್ಮ, ಒಗ್ಗಟ್ಟು, ಸಹಾಯ, ಪ್ರೇಮ, ವಿಶ್ವಾಸ, ಸಾಹಸ, ಧೈರ್ಯ ಇರುವ ಈ ಮಕ್ಕಳನ್ನು ಸಮಾಜದ ಒಳ್ಳೆಯ ವ್ಯಕ್ತಿಗಳನ್ನಾಗಿ ಮಾಡಲು ಶ್ರಮಿಸುತ್ತಿರುವ ಹಿಂದು ಸೇವಾ ಪ್ರತಿಷ್ಠಾನಕ್ಕೆ ನನ್ನ ವಂದನೆಗಳು. ಈ ಮಕ್ಕಳು ಇದೇ ರೀತಿ ಮುಂದುವರೆಯುವಂತೆ ಮಾರ್ಗದರ್ಶನ ಮಾಡುವ, ಪ್ರೇರಣೆ ನೀಡುವ ಕೆಲಸಗಳು ನಡೆದರೆ ಒಂದು ಸಮಾಜವನ್ನೇ ಬದಲಾವಣೆ ಮಾಡುವ ಶಕ್ತಿ ಈ ಮಕ್ಕಳಿಗಿದೆ.

**– ಮಹೇಶ್ ಎಲ್.ಡಿ.**
ಗುಂಡ್ಲುಪೇಟೆ

* * * * * *

**ನಲ್ಮೆಯ ತಂಗಿ ಸತ್ಯವತಿ**

ನೀವು ಬರುವುದು ಅಂತ ಗೊತ್ತಾಗಿ ನನಗೆ, ನಮ್ಮ ಮನೆಯವರಿಗೆ ತುಂಬಾ ಖುಷಿಯಾಗಿದೆ. ನೀವು ಇಬ್ಬರೂ ನನಗೆ ಸ್ವಂತ ತಂಗಿಯರಂತೆ ಕಾಣಿಸಿತು. ನಿಮ್ಮನ್ನು ಕಲ್ಲಡ್ಕದಿಂದ ಕರೆದುಕೊಂಡು ಬರುವಾಗ ನನಗು ಸ್ವಲ್ಪ ಸಂಕೋಚವಾಯಿತು. ಆದರೆ ಮನೆಗೆ ಬಂದ ನಂತರ ನಿಮ್ಮಲ್ಲಿ ನನಗೆ ತುಂಬಾ ಖುಷಿಯಾಯಿತು. ಜೊತೆಯಾಗಿ ಆಟ ಆಡಿಕೊಂಡು ನಮ್ಮ ಮನೆಯವರಂತೆ ಜೊತೆಗೆ ಕೆಲಸ ಮಾಡಿಕೊಂಡು ಸಹಕರಿಸುವುದನ್ನು ನೋಡಿದರೆ ನನಗೂ ನಮ್ಮ ಮನೆಯವರಿಗೂ ತುಂಬಾ ಖುಷಿಯಾಯಿತು. ನೀವು ಪ್ರತಿವರ್ಷವೂ ರಜಾ ಸಿಕ್ಕಾಗ ನಮ್ಮ ಮನೆಗೆ ಬನ್ನಿ. ನನಗೆ ಎಲ್ಲಾ ರೀತಿಯಲ್ಲೂ ಸಹಕರಿಸುತ್ತಿದ್ದ ನೀವು ನನ್ನನ್ನು ಬಿಟ್ಟು ಮತ್ತೆ ಪುನಃ ನಿಮ್ಮ ಊರಿಗೆ ಕಳುಹಿಸಿಕೊಡುವುದು ಅಸಾಧ್ಯ. ನಿಮ್ಮನ್ನು ಹೇಗೆ ಕಳುಹಿಸಿಕೊಡಲಿ ಅಂತ ಬೇಸರ ಆಗುತ್ತದೆ. ಚೆನ್ನಾಗಿ ಓದಿ ಒಳ್ಳೆಯ ಹೆಸರು ಗಳಿಸಿ ಎಂದು ಹಾರೈಸುವೆ.

**ನಿನ್ನ ಪ್ರೀತಿಯ ಅಕ್ಕ - ಪವಿತ್ರಾ ಎಂ, ಬೋಳಂತೂರು.**

**ಮುಂದಿನಪುಟಕ್ಕೆ..........................**

## ಮನೆಮಂದಿಯ ಅನಿಸಿಕೆಗಳು :

**ಗೆ,**

ನಿರ್ದೇಶಕರು, **ಹಿಂದು ಸೇವಾ ಪ್ರತಿಷ್ಠಾನ**

ಬಾಗಲಕೋಟೆ ಜಿಲ್ಲೆ ಕೆರೂರಿನ ಶ್ರೀರಮೇಶ ಧ. ಬಾವುರಾವ್ ಬೇಲಾಳ ಕುಟುಂಬದವರ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲು, ಸಂತೋಷ ಹಾಗೂ ಧನ್ಯತೆ ಎನಿಸುತ್ತದೆ. ಪ್ರತಿಷ್ಠಾನವು ವ್ಯಕ್ತಿಗಳ ಪ್ರತಿ ಸ್ಥಾನವನ್ನು ನಿರ್ಮಿಸಲು ಯಶಸ್ವಿ ಮೆಟ್ಟಿಲುಗಳನ್ನು ಏರುತ್ತಾ ಸಮಾಜದ ದೀನ ದಲಿತರ ಕಣ್ಣೀರೊರೆಸುವ ಮಹತ್ ಕಾರ್ಯದಲ್ಲಿ ತೊಡಗಿರುವುದು ಅಮೋಘ ಕಾರ್ಯವೇ ಸರಿ. ಪ್ರತಿಷ್ಠಾನವು ನಡೆಸುವ ಎಲ್ಲ ಕಾರ್ಯಗಳು ಮೌಲ್ಯಯುತವೆ ಬಳಲಿದವರ ಬದುಕಿನಲ್ಲಿ ಬೆಳದಿಂಗಳ ಹರಿಸುತ ನೊಂದ ಬೆಂದ ಮನಗಳನ್ನು ಜೋಡಿಸುವ ಕಾರ್ಯ ನಡೆದಿರುವುದು ಶ್ಲಾಘನೀಯ.

**"ನೆಲೆ"** ಇದು ಮಕ್ಕಳ ನೆಲೆ ಎನ್ನುವುದಕ್ಕಿಂತ "**ಸಮಾಜದ ನೆಲೆ**" ಎನ್ನುವುದು ನಮ್ಮ ಅಭಿಪ್ರಾಯ. ನೆಲೆ ಮಕ್ಕಳು ಪೂರ್ಣ ಕುಟುಂಬದ ಮಧ್ಯೆ ಹಲವಾರು ದಿನಗಳನ್ನು ಕಳೆದು ಕುಟುಂಬಗಳ ಪ್ರೀತಿ, ವಾತ್ಸಲ್ಯ ಹೊಸತನ, ಹೊಸ ಅನುಭವ ಪಡೆಯುವಂತೆ ಪ್ರತಿಷ್ಠಾನವು ಯೋಜಿಸಿದ್ದೆ ಒಂದು ಅದ್ಭುತ, ಅಭಿನಂದನೀಯ. ಅದಕ್ಕಾಗಿ ಪ್ರತಿಷ್ಠಾನದ ಹಿರಿಯರಿಗೆ ಅಭಿನಂದನೆಗಳು. ಕೆರೂರಿಗೆ ನೆಲೆಯ ಐದು ಮಕ್ಕಳನ್ನು ಕಳಿಸಿ ಅವರನ್ನು ನಮ್ಮ ಮನೆಗಳಲ್ಲಿ ಇರುವಂತೆ ಮಾಡಿದ ತಮಗೆ ನಮ್ಮ ಕುಟುಂಬದ ಎಲ್ಲ ಸದಸ್ಯರು ಪ್ರತಿಷ್ಠಾನಕ್ಕೆ ವಂದನೆಗಳನ್ನು ಸಲ್ಲಿಸುತ್ತೇವೆ.

**"ಚಂದನ ನೆಲೆ"**ಯ ಮಗು ಅರುಣ ಕುಮಾರ ನಮ್ಮ ಮನೆಯ ಅರಣೋದಯವನ್ನುಂಟುಮಾಡಿ ನಮ್ಮ ಮನೆ ಮಗನಾಗಿ ಆರುದಿನಗಳ ಅವನ ನಡುವಳಿಕೆ, ಕಾರ್ಯವೈಖರಿ ಪ್ರಾಮಾಣಿಕತೆ ಆದರ್ಶಪ್ರಾಯವಾಗಿತ್ತು. ಇಲ್ಲಿ ಅವನ ನಡವಳಿಕೆಯೇ ನಮಗೆ ಒಂದು "ಉಲ್ಲೇಕಾರ್ಹ ಸಂಗತಿ" ಎನಿಸುತ್ತಿದೆ. ನೆಲೆ ಇಲ್ಲದ ಬೆಲೆಯಿಲ್ಲದ ಲಕ್ಷಾಂತರ ಹೃದಯಗಳು ರಾಷ್ಟ್ರದಲ್ಲಿ ಇರುವುದು ಒಂದು ಕಪ್ಪು ಚುಕ್ಕೆ. ಇಂತಹ ಮಕ್ಕಳನ್ನು ದುರುಪಯೋಗ ಪಡೆಸಿಕೊಂಡು. ತಮ್ಮ ಜೀವನ ಮತ್ತು ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಎಂತಹ ಕಾರ್ಯಗಳನ್ನಾದರೂ ಮಾಡಿಸುವ ವ್ಯಕ್ತಿಗಳ ಕಪಿ ಮುಷ್ಠಿಯಿಂದ ಕಳಚಿ, ಇಂತಹ ನೆಲೆಗಳನ್ನು ಪ್ರತಿ ನಗರ ಪ್ರದೇಶಗಳಲ್ಲಿ ಸ್ಥಾಪಿಸುವಂತೆ ಪ್ರೇರೆಪಿಸುವ ಕಾರ್ಯ ಆಗಬೇಕಿದೆ. ಈ ಕಾರ್ಯಕ್ಕೆ ನಾವೆಲ್ಲ ಕೈ ಜೋಡಿಸಲು ಸದಾಸಿದ್ದ. ನೆಲೆ ಕಳೆದುಕೊಂಡ ಕುಟುಂಬಗಳ ಒಲೆ ಸದಾ ಉರಿಯುವಂತಾಗಲಿ ಎಂದು ಪ್ರಾರ್ಥಿಸುವ.

**ತಮ್ಮವ – ಬೇಲಾಳ ಕುಟುಂಬ ವರ್ಗ, ಕೆರೂರು**

ಚಿರಂಜೀವಿ ರೇಣು ನಮ್ಮಲ್ಲಿ ಬಂದದ್ದು ತುಂಬಾ ಸಂತೋಷವಾಯಿತು. ಕಾರಣ ಅವನು ನೆಲೆ ಮಗು ಎಂಬುದು ತಿಳಿದಿತ್ತು. ಆದರೆ ಇಲ್ಲಿಗೆ ಬಂದಮೇಲೆ ಅವನನ್ನು ನೋಡಿ ನಮಗೆ ಆರೀತಿ ಅನಿಸಲಿಲ್ಲ. ಕಾರಣ ಅವನು ನಮ್ಮೆಲ್ಲರ ಜೊತೆ ಹೊಂದಿಕೊಳ್ಳುವ ರೀತಿ ಆತನಿಗಿತ್ತು. ನಿಮ್ಮೆಲ್ಲರ ಪರಿಶ್ರಮವು ಅಂದರೆ ನರೇಂದ್ರ ನೆಲೆಯವರ ಪರಿಶ್ರಮವು ಯಾವ ರೀತಿ ಎಂಬುದು ಅರ್ಥವಾಯಿತು. ಇನ್ನು ನೆಲೆಯ ಮಕ್ಕಳ ಬಗ್ಗೆ ಹೇಳ ಬೇಕೆಂದರೆ ಆ ಮಕ್ಕಳಿಂದ ನಮ್ಮ ಮಕ್ಕಳು ಕಲೆಯಬೇಕಾದದ್ದು ತುಂಬಾ ಇದೆ ಎಂದೆನಿಸಿತು. ನೆಲೆಯ ಮಕ್ಕಳು ಪರಕೀಯರು ಎಂಬ ಭಾವನೆಯು ಯಾರಲ್ಲಿಯೂ ಬರಲಿಲ್ಲ. ಆದರೆ ನೆಲೆಯ ಮಕ್ಕಳು ಇಲ್ಲಿಗೆ ಬಂದದ್ದು ಜೋರಾಗಿ ಮಳೆಯು ಬಂದು ನಿಂತರೆ ಹೇಗಾಗುತ್ತದೆಯೋ ಆ ರೀತಿಯಾಯಿತು. ಕಾರಣ ಮಕ್ಕಳು ಬಂದ ಅವಧಿಯು ತಂಬಾ ಕಡಿಮೆಯಾಯಿತು. ಮುಂದಿನ ಸಲ ರಜೆಗೆ ತಪ್ಪದೆ ಈ ಮಕ್ಕಳನ್ನು ಕಳಿಸಿಕೊಡುವಿರೆಂದು ಭಾವಿಸುತ್ತೇವೆ. ಈ ಮಕ್ಕಳೆಲ್ಲರೂ ಹೋದ ಮೇಲೆ ತುಂಬಾ ಬೇಜಾರು ಆಯಿತು. ಮರೆಯದೆ ಮುಂದಿನ ಅವಧಿಗೆ ನಮ್ಮಲ್ಲಿಗೆ ಇನ್ನು ಹೆಚ್ಚಿನ ಮಕ್ಕಳನ್ನು ಕಳುಹಿಸಿರಿ.

**ಇಂತಿ, ಶೋಭಾ ನ. ಭಾವಿಕಟ್ಟಿ.**

* * * * * *

ಮಲ್ಲಿಕಾ ಒಳ್ಳೆ ಗುಣ ನಡತೆ ಮತ್ತು ಸಂಸ್ಕೃತಿಯನ್ನು ಹೊಂದಿದ ಮಗುವಾಗಿದ್ದಾಳೆ, ಅವಳು ನಮ್ಮಲ್ಲಿಗೆ ಬಂದ ದಿನದಿಂದ ನಮ್ಮ ಮನೆಯ ವಾತವರಣವೇ ಬದಲಿಯಾದಂತೆ ಅನ್ನಿಸುತ್ತಿದೆ. ಅವಳ ನಡೆ ನುಡಿ ಕೊಡುವ ಮರ್ಯಾದೆ ವಿನಯ ನಾಜೂಕುತನದಿಂದ ನಮ್ಮ ಮನಗೆದ್ದಿದ್ದಾಳೆ. ಅವಳ ಸರಳತೆ ನಮ್ಮ ಮನೆಯ ಮಕ್ಕಳಿಗೆ ಮಾರ್ಗದರ್ಶನವಾಗಿದೆ. ತನ್ನಲ್ಲಿರುವ ಅಭಿರುಚಿಗಳನ್ನು ಹತ್ತಿಕ್ಕಿ ನಮ್ಮ ಮನೆಯ ವಾತಾವರಣಕ್ಕೆ ಅನುಗುಣವಾಗಿ ಇಲ್ಲಿಯ ಅಭಿರುಚಿಗಳಿಗೆ ತಕ್ಕಂತೆ ಇರುವ ಪ್ರಯತ್ನ ಮಾಡಿದ್ದಾಳೆ.

ಈ ಚಿಕ್ಕ ವಯಸ್ಸಿನಲ್ಲೆ ಇಷ್ಟೊಂದು ಒಳ್ಳೆಯ ಗುಣ ಬೆಳೆಸಿದ್ದಕ್ಕೆ ನಿಮಗೆ ನಿಮ್ಮ ನೆಲೆಗೆ ಎಷ್ಟು ಧನ್ಯವಾದಗಳನ್ನು ಹೇಳಿದರೂ ಸಾಲದು.

ಪ್ರತಿಯೊಬ್ಬ ಭಾರತೀಯರಲ್ಲಿ ಬೇಕಾದ ಸುಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಪ್ರಯತ್ನಕ್ಕೆ ನಮ್ಮ ಸಹಕಾರ ಬೇಕಾದಲ್ಲಿ ಧಾರಾಳವಾಗಿ ನಾವು ಸಹಕಾರ ನೀಡಲು ಸಿದ್ಧ.

ಪ್ರತಿವರ್ಷ ಬೇಸಿಗೆ ರಜೆಯಲ್ಲಿ ಮಕ್ಕಳನ್ನು ಕಳುಹಿಸುವ ಯೋಜನೆ ಸಮಯೋಚಿತ. ನಿಮ್ಮ ಪ್ರಯತ್ನಕ್ಕೆ ಬಲ ಬರಲೆಂದು ದೇವರಲ್ಲಿ ಪ್ರಾರ್ಥಿಸುವೆ.

**ಇಂತಿ,**

**ನಿಮ್ಮ, ವಿಜಯ ಕುಮಾರ್ ಪಿ. ಹಲುಗಲಿಮಠ್**

## ಕುಂಭಾಶಿ – ಶಿಶು ಮಂದಿರ ವಾರ್ಷಿಕೋತ್ಸವ



ಪ್ರತಿಷ್ಠಾನದ ಸಹಕಾರದೊಂದಿಗೆ ನಡೆಯುತ್ತಿರುವ ಶ್ರೀ ನಾಗಾಚಲ ಅಯ್ಯಪ್ಪಸ್ವಾಮಿ ಶಿಶು ಮಂದಿರದ ಎರಡನೆ ವಾರ್ಷಿಕೋತ್ಸವ 2009ರ ಏಪ್ರಿಲ್ 11ರಂದು ಕೋಟೇಶ್ವರದ ಕುಂಭಾಶಿಯಲ್ಲಿ ನಡೆಯಿತು.

ಸ್ಥಳೀಯ ಯುವಕ ಮಂಡಲದ ಅಧ್ಯಕ್ಷರಾದ ಶ್ರೀ ಸೀತಾರಾಮ ಧನ್ಯ ಗೋಪಾಡಿಯವರು ಅಧ್ಯಕ್ಷರಾಗಿಯೂ; ಮುಖ್ಯ ಅತಿಥಿಗಳಾಗಿ ಶ್ರೀಮತಿ ಪದ್ಮಿನಿ ಎಸ್. ಪ್ರಭುರವರು ಆಗಮಿಸಿದ್ದರು. ಮುಖ್ಯ ವಕ್ತಾರರಾಗಿ ಪ್ರತಿಷ್ಠಾನದ ಸಂಚಾಲಕಿ ಭ॥ ಪ್ರತಿಭಾ ಆಗಮಿಸಿ ಕಾರ್ಯಕ್ರಮ ಚಂದಗಾಣಿಸಿದರು. ಕಾರ್ಯಕ್ರಮದ ಕಡೆಯಲ್ಲಿ ಮಾತೆಯರಿಂದ, ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

RNI No. KAR KAN/2005/22027 Postal Registration No. KA/RNP/BGS/2041/2008-2010

# ಯೂತ್ ಫಾರ್ ಸೇವಾದಿಂದ "ಕಾರ್ಯಕರ್ತರ ಅಭಿನಂದನಾ ದಿನಾ"

ದಿನಾಂಕ 11 ಏಪ್ರಿಲ್ 2009ರಂದು ಜಯನಗರದ ಆರ್.ವಿ.ಟೀಚರ್ಸ್ ಕಾಲೇಜಿನಲ್ಲಿ ಯೂತ್ ಫಾರ್ ಸೇವಾ ವತಿಯಿಂದ ಸ್ವಯಂಸೇವಕರ "ಅಭಿನಂದನಾ ದಿನ" ವನ್ನು ಆಚರಿಸಲಾಯಿತು. ಕಳೆದ ವರ್ಷ ಟೈಮ್ಸ್ ಆಫ್ ಇಂಡಿಯಾದ 'ಟೀಚ್ ಇಂಡಿಯಾ' ಯೋಜನೆಯಲ್ಲಿ ಭಾಗಿಯಾಗಿದ್ದ ಯೂತ್ ಫಾರ್ ಸೇವಾ, ಆ ಮೂಲಕ ಸಾವಿರಾರು ಸ್ವಯಂಸೇವಕರನ್ನು ಕಲೆಹಾಕಿ, ಬೆಂಗಳೂರಿನ ವಿವಿಧ ಸರ್ಕಾರಿ ಶಾಲೆಗಳು ಹಾಗೂ ಸೇವಾಬಸ್ತಿಗಳ ಶಿಕ್ಷಣ ಕೇಂದ್ರಗಳಲ್ಲಿ ಅಧ್ಯಾಪನಕ್ಕಾಗಿ ತರಬೇತಿ ನೀಡಿ ಕಳುಹಿಸಿಕೊಟ್ಟಿತ್ತು.

2008-2009ನೇ ಸಾಲಿನ ಶೈಕ್ಷಣಿಕ ವರ್ಷದ ಸಮಾರೋಪದ ಅಂಗವಾಗಿ ಸ್ವಯಂಸೇವಕರನ್ನು ಒಟ್ಟುಗೂಡಿಸಿ, ಅವರ ಕಾರ್ಯ ಸಾಧನೆಯ ಮೆಚ್ಚುಗೆಗಾಗಿ ನಲ್ನುಡಿಗಳನ್ನು ಹಾಗೂ ಪ್ರಮಾಣ ಪತ್ರವನ್ನು ವಿತರಿಸುವ ಕಾರ್ಯಕ್ರಮವನ್ನು ವೈಎಫ್ಎಸ್ ಹಮ್ಮಿಕೊಂಡಿತ್ತು.

ಸಾಮಾಜಿಕ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದು ಖ್ಯಾತರಾಗಿರುವ, ರೇವಾ ಕಾರ್ ಉತ್ಪಾದಕರಾದ ಮೈನಿ ಗ್ರೂಪ್ ಆಫ್ ಕಂಪೆನೀಸ್‌ನ ಸ್ಥಾಪಕ ಡಾ.ಎಸ್.ಕೆ.ಮೈನಿ ಅವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಈ ಕಾರ್ಯಕ್ರಮದಲ್ಲಿ ವೈ ಎಫ್ ಎಸ್ ಸ್ವಯಂಸೇವಕರು ಹಾಗೂ ಹಿತೈಷಿಗಳು ಸೇರಿದಂತೆ ಸುಮಾರು 300 ಜನರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸ್ವಯಂಸೇವಕರಿಂದ ಸಾಮಾಜಿಕ ಜಾಗೃತಿಯನ್ನು ಪ್ರಚೋದಿಸುವ ಸ್ಕಿಟ್‌ಗಳು, ವೈ ಎಫ್ ಎಸ್ ಕುರಿತಾದ ಸಾಕ್ಷ್ಯ ಚಿತ್ರ, 2008-09 ನೇ ಸಾಲಿನ ಮುಖ್ಯಾಂಶಗಳು ಹಾಗೂ 2009-10ನೇ ಸಾಲಿನ ಯೋಜನೆಗಳ ಕುರಿತು ಮುನ್ನೋಟ ಮೊದಲಾದವುಗಳು ಪ್ರದರ್ಶನಗೊಂಡವು.

ವೈ ಎಫ್ ಎಸ್ ನಿಂದ ತರಬೇತಿ ಪಡೆದ ಇತರ ಎನ್ ಜಿ ಓ ಗಳ ಸದಸ್ಯರು ತಮ್ಮ ಅನುಭವಗಳನ್ನು ವೇದಿಕೆಯ ಮೇಲೆ ಹಂಚಿಕೊಂಡರು. ವೈ ಎಫ್ ಎಸ್ ನಿಂದಾಗಿ ತಮಗೆ ಸಂತೃಪ್ತಿಯ ವರದಾನ ದೊರೆತಿರುವುದಾಗಿಯೂ ಯುವ ಜನರನ್ನು ಸಾಮಾಜಿಕ ಕಾರ್ಯಗಳತ್ತ ಪ್ರೇರೇಪಿಸುತ್ತಿರುವ ಈ ಸಂಸ್ಥೆಯು ಪ್ರಗತಿ ಕಾಣದ, ಸೌಲಭ್ಯವಂಚಿತ ಜನ ಸಮೂಹಕ್ಕೆ ಆಶಾಕಿರಣವಾಗಿರುವುದಾಗಿಯೂ ಈ ಸ್ವಯಂಸೇವಕರು ಪ್ರತಿಕ್ರಿಯಿಸಿದರು.

ವೈ ಎಫ್ ಎಸ್‌ನ ಕಾರ್ಯ ವೈಖರಿಯನ್ನು ಹಾಗೂ ಎಲ್ಲ ಸ್ವಯಂಸೇವಕರ ಸೇವಾಭಾವವನ್ನು ಪ್ರತಿಯೊಬ್ಬರೂ ಮುಕ್ತ ಹೃದಯದಿಂದ ಕೊಂಡಾಡಿದರು. ಡಾ.ಮೈನಿ ಅವರು ಪಾಶ್ಚಾತ್ಯ ಜಗತ್ತಿನ ಪ್ರಭಾವದಿಂದ ನಮ್ಮ ಸಂಸ್ಕೃತಿಯು ನಿಧಾನವಾಗಿ ಕಣ್ಮರೆಯಾಗುತ್ತಿದೆಯೆಂದು ಬೇಸರ ವ್ಯಕ್ತಪಡಿಸುತ್ತಾ, ನಮ್ಮ ಮೌಲ್ಯಗಳನ್ನು ಉಳಿಸಿ ಬೆಳೆಸುತ್ತಿರುವುದಕ್ಕಾಗಿ ವೈಎಫ್ಎಸ್ ಅನ್ನು ಪ್ರಶಂಸಿಸಿದರು. ನಮ್ಮ ದೇಶದ ಬಹುಭಾಗವು ಗ್ರಾಮ್ಯವಾಗಿದ್ದು, ಹಳ್ಳಿಗಳ ರಕ್ಷಣೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡಬೇಕೆಂದೂ ಅವರು ಕಿವಿಮಾತು ಹೇಳಿದರು. ಐ.ಐ.ಎಮ್.ಬಿ.ಯ ಪ್ರೊ. ವೈದ್ಯನಾಥನ್, ಸ್ವಯಂಸೇವಕರ ಕೆಲಸಗಳನ್ನು ಹಾಗೂ ಇತರ ದೇಶಗಳಿಗೆ ಸ್ವಯಂಸೇವಕರನ್ನು ಕಳುಹಿಸಿಕೊಡುವ ವೈಎಫ್ಎಸ್‌ನ ದೂರದೃಷ್ಟಿಯನ್ನು ಬಹುವಾಗಿ ಮೆಚ್ಚಿಕೊಂಡರು.

ರಾಷ್ಟ್ರ ಗಾನವಾದ 'ವಂದೇ ಮಾತರಂ' ಗೀತೆಯೊಂದಿಗೆ ಈ ಕಾರ್ಯಕ್ರಮವು ಸಮಾಪ್ತವಾಯಿತು. ಪ್ರತಿಯೊಬ್ಬರೂ ಗೌರವ ಸೂಚಕವಾಗಿ ಎದ್ದು ನಿಂತು, ದೇಶಕ್ಕಾಗಿ ತಾವು ಸಲ್ಲಿಸಬಹುದಾದ ಸೇವಾ ಕಾರ್ಯಗಳ ಆಲೋಚನೆಯೊಂದಿಗೆ ಅದರಲ್ಲಿ ಭಾಗಿಯಾದರು.


## Youth For Seva (A Project of Hindu Sev Pratishthana)

**Gift a School Kit**
So children can write their destiny



**YFS School Kit Sponsorship aims at providing school kits to financially challenged students in Bangalore & many villages across Karnataka.**

Draw a cheque in the name of **HSP - Youth for Seva** and mail it to 8/28, Ajithashree, Bull Temple Road, Basavanagudi, Bangalore - 04

**Note** : All Donations are Tax exempt under Sec 80 (G).

*** It Costs Only Rs. 200 to sponsor one School Kit**

School Kit Contains a Bag, 10 Note Books, Geometry Box, Pencil, Pen, eraser, and Sharpner.

www.youthforseva.org

**for more deatisl contact**
080 -65468046; 98863 89229



Postal Registration No.
KA/RNP/BGS/2041/2008-2010
RNI No. KAR KAN /2005/22027
Office of Posting : Basavanagudi H.P.O.,BG-4. 15th of every month

SEWA DISHA
ಸೇವಾ ದಿಶಾ
2009 ಮೇ ಸಂಚಿಕೆ


ಇವರಿಗೆ

Printed, Published, Owned by **K. S. Nagabhushan** and Printed at **Rashtrotthana Mudranalaya**, K. G. Nagar, Bangalore - 560 019 and Published at **Ajitasri,** 8/28, Basavanagudi Road, Bangalore - 560 004. Editor : **K. R. Shivaswamy. Website :** www.hinduseva.org